

ಶ್ರೀ ಗಣೇಶ ಶಾರದ ಗುರುಭ್ಯೋ ನಮಃ





ಶ್ರೀ ಗಣೇಶ ಶಾರದ ಗುರುಭ್ಯೋ ನಮಃ

## ಗುರುವಾಯೂರಪ್ಪನ್ ಮಾನಸಿಕ ದರ್ಶನ

ಗೌರೀಪುತ್ರ ನಮಸ್ತೇಸ್ತು ಶಂಕರಪ್ರಿಯಪುತ್ರಕ ।
ನಮಸ್ತೇ ದೇವದೇವೇಶ ನಮಸ್ತೇ ಗಣನಾಯಕ ॥
ಶ್ರೀವಿದ್ಯಾಂ ಜಗತಾಂ ಧಾತ್ರೀಂ ಸರ್ಗಸ್ಥಿತಿಲಯೇಶ್ವರೀಮ್ ।
ನಮಾಮಿ ಲಲಿತಾಂ ನಿತ್ಯಾಂ ಮಹಾತ್ರಿಪುರಸುಂದರೀಂ ॥
ಶ್ರುತಿ ಸ್ಮೃತಿ ಪುರಾಣಂ ದೇವಾಲಯಂ ಕರುಣಾಲಯಮ್ ।
ನಮಾಮಿ ಭಗವತ್ಪಾದಂ ಶಂಕರಂ ಲೋಕಶಂಕರಮ್ ॥
ಗುರುವಾಯುಪುರಾಧೀಶಂ ವಿಷ್ಣುಂ ನಾರಾಯಣಂ ಹರಿಮ್ ।
ವಾಸುದೇವಂ ಜಗನ್ನಾಥಂ ಕೃಷ್ಣಂ ವಂದೇ ಜಗದ್ಗುರುಮ್ ॥
ಸಾಂದ್ರಾನಂದಾವ ಭೋಧಾತ್ಮಕಮನುಪಮಿತಂ ಕಾಲದೇಶಾವಧಿಭ್ಯಾಂ
ನಿರ್ಮುಕ್ತಂ ನಿತ್ಯಮುಕ್ತಂ ನಿಗಮಶತಸಹಸ್ರೇಣ ನಿರ್ಭಾಸ್ಯಮಾನಮ್ ।
ಅಸ್ಪಷ್ಟಂ ದೃಷ್ಟಮಾತ್ರೇ ಪುನರುರುಪುರುಷಾರ್ಥಾತ್ಮಕಂ ಬ್ರಹ್ಮತತ್ತ್ವಂ
ತತ್ತಾವದ್ಭಾತಿ ಸಾಕ್ಷಾತ್ ಗುರುಪವನಪುರೇ ಹಂತಭಾಗ್ಯಂ ಜನಾನಾಮ್ ॥

ಸಚ್ಚಿದಾನಂದ ಘನನೂ, ಜ್ಞಾನಸ್ವರೂಪನೂ, ಸರ್ವವ್ಯಾಪಕನೂ ಆದ ಪರಬ್ರಹ್ಮ ಸಗುಣ ಸಾಕಾರ ರೂಪದಿಂದ ನೆಲೆಸಿರುವ ದಿವ್ಯಕ್ಷೇತ್ರ ಗುರುವಾಯೂರು. ಗುರುವಾಯೂರು ಪುರಾಧಿನಾತ ಶ್ರೀಮನ್ನಾರಾಯಣನ ಮಹಿಮೆಗಳನ್ನೂ, ಲೀಲೆಗಳನ್ನೂ ವಿವರಿಸುವ ಭಕ್ತಿಮಯ ಕಾವ್ಯ ನಾರಾಯಣೀಯಂ. ಮೇಲ್ಪತ್ತೂರು ನಾರಾಯಣ ಭಟ್ಟತಿರಿ ವಿರಚಿತ ನಾರಾಯಣೀಯಂ ವ್ಯಾಸ ಭಾಗವತದ ಸಂಗ್ರಹ ರೂಪ, ಭಕ್ತಿ ಭಾವಕ್ಕೆ ಆಲಂಬನೆ, ಭಗವಂತನ ಸನ್ನಿಧಾನದಲ್ಲಿ ಭಕ್ತ ನಿವೇದಿಸುವ ಮನೋವೇದನೆಯ ಪ್ರತಿರೂಪ, ನಾರಾಯಣೀಯಂ ಕಾವ್ಯದ ಸಪ್ತಾಹ ಪಾರಾಯಣೆ ಮಾಡುವ ಸೌಭಾಗ್ಯ ನಮ್ಮ ನಾದಾರ್ಚನೆ ತಂಡಕ್ಕೆ ದೊರೆತಿದ್ದು ನಮ್ಮ ಪೂರ್ವಜನ್ಮ ಸುಕೃತ. ಮೇಲ್ಪತ್ತೂರು ನಾರಾಯಣ ಭಟ್ಟತಿರಿ ವಿರಚಿತ ನಾರಾಯಣೀಯಂ ಒಂದು ಪ್ರತಿಭಾನ್ವಿತ ಶ್ರದ್ಧಾ ಚಿಕಿತ್ಸೆಯ ಅಧ್ಯಾತ್ಮಿಕ ಸಮಾಲೋಚನೆ. ಸ್ವತಃ ನಾರಾಯಣ ಭಟ್ಟತಿರಿಗಳೇ ತನ್ನ ಕ್ಲಿಷ್ಟ

ವಾತರೋಗದಿಂದ ಸಂಪೂರ್ಣ ಆರೋಗ್ಯ ಭಾಗ್ಯ ಪಡೆದ ಭಕ್ತಿಮಾರ್ಗದ ಭಾವುಕ ಯಾತ್ರೆಯ ನಿದರ್ಶನ. ಭಕ್ತಾಗ್ರೇಸರರಾದ ಭಟ್ಟತಿರಿಯವರಿಂದ ಗುರುವಾಯೂರ್ ಕ್ಷೇತ್ರದಲ್ಲಿ ನೆಲೆಸಿರುವ ಶ್ರೀಮಹಾವಿಷ್ಣುವನ್ನು ಸಂಭೋಧಿಸುತ್ತಾ ಸಂಸ್ಕೃತದಲ್ಲಿ ಜಾರಿಬಂದ ಮಧುರ ಕೃತಿ. ಇಂದಿಗೂ ಆದಿವ್ಯಾಧಿಗಳಿಗೆ ಗುರಿಯಾದ ಅನೇಕ ಭಕ್ತರು ಸಂಪೂರ್ಣ ಆರೋಗ್ಯದಿಂದ ಗುಣಮುಖರಾಗಿ ಸತ್ಫಲಗಳನ್ನು ಪಡೆಯುತ್ತಿರುವ ಗುರುವಾಯೂರು ಸ್ವಾಮಿಯ ಮಹಿಮೆ ಮತ್ತು ನಾರಾಯಣೀಯಂ ಪಾರಾಯಣೆಯ ದಿವ್ಯ ಅನುಭವಗಳ ತಿಳುವಳಿಕೆ, ಶ್ರೀ ಗುರುವಾಯೂರು ಪುರಾಧೀಶನ ಮತ್ತು ನಾರಾಯಣೀಯಂ ನಂತಹಾ ಮಹಾಕಾವ್ಯದ ರಚನೆ ನಡೆದ ಪವಿತ್ರ ಸ್ಥಳದ ದರ್ಶನ ಮಾಡಬೇಕೆಂಬ ಹಂಬಲ, ಈ ಭಕ್ತಿಮಯ ಕಾವ್ಯದ ಪಾರಾಯಣೆಯಾದ ಕ್ಷಣದಿಂದ. ನಾರಾಯಣ ಭಟ್ಟತಿರಿಗಳಿಗೆ ಧನ್ವಂತರಿಯಾಗಿ, ಕುರೂರಮ್ಮನ ಸಾಕುಮಗನಾಗಿ, ಮಂಜುಳೆಯ ಪಾಲಿಗೆ ಆಶ್ರಿತವತ್ಸಲನಾಗಿ, ನಂಬೂದ್ರಿಯ ಮಗ ಉನ್ನಿಯ ಭಕ್ತಿಗೆ ಕರಗಿದ ದಯಾಳುವಾಗಿ ನಾನಾರೂಪಗಳಲ್ಲಿ, ನಾನಾವಿಧಗಳಲ್ಲಿ ಭಕ್ತರನ್ನು ಸಲಹಿದ ಪರಮಾತ್ಮನು ನಮ್ಮ ಹಂಬಲವನ್ನು ಅರಿತು, ದಿವ್ಯಮಂಗಳ ದರ್ಶನ ಭಾಗ್ಯವನ್ನು ಕರುಣಿಸಿದ ಶುಭ ಘಳಿಗೆ ಭಾದ್ರಪದ ಮಾಸದ ಕೃಷ್ಣ ಪಕ್ಷದ ಏಕಾದಶಿ ಪ್ರಾತಃ ಕಾಲದ ಬ್ರಾಹ್ಮೀ ಮಹೂರ್ತ.

ಇಂದಿನ ದಿನವೇ ಶುಭದಿನವು

ಇಂದಿನ ವಾರ ಶುಭವಾರ

ಇಂದಿನ ತಾರೆ ಶುಭತಾರೆ


ಇಂದಿನ ಯೋಗ ಶುಭಯೋಗ

ಇಂದಿನ ಕರಣ ಶುಭಕರಣ.

ಗುರುವಾಯೂರಿನ ವೈಶಿಷ್ಟ್ಯ, ಸ್ಥಳ ಮಹಾತ್ಮೆ, ಪಾತಾಲಾಂಜನ ಶಿಲೆಯ ಅರ್ಚಾಮೂರ್ತಿ ಮತ್ತು ಶ್ರೀ ಶಂಕರಭಗವತ್ಪಾದರಿಂದ ರೂಪುಗೊಂಡ ಪೂಜಾ ವಿಧಾನ. ವೈಕುಂಠದಲ್ಲಿ ಸಾಕ್ಷಾತ್ ಶ್ರೀಮಹಾವಿಷ್ಣುವಿನಿಂದ ಪೂಜಿಸಲ್ಪಟ್ಟ ಈ ಅರ್ಚಾಮೂರ್ತಿಯು ವೈಕುಂಠನಾಥನಿಂದ ಬ್ರಹ್ಮನಿಗೆ, ಚತುರ್ಮುಖನಿಂದ ಸುತಪನಿಗೆ, ಸುತಪನಿಂದ ಕಶ್ಯಪ ಪ್ರಜಾಪತಿಗೆ, ಕಶ್ಯಪನಿಂದ ವಸುದೇವನಿಗೆ ನಂತರ ದ್ವಾರಕೆಯಲ್ಲಿ ಶ್ರೀಕೃಷ್ಣನಿಂದ ಪೂಜಿಸಲ್ಪಟ್ಟು,

ದ್ವಾಪರಯುಗಾಂತದಲ್ಲಿ ಶ್ರೀಕೃಷ್ಣನ ಆದೇಶದ ಮೇರೆಗೆ ಶ್ರೀಕೃಷ್ಣನ ಆಪ್ತ ಸಖನಾದ ಉದ್ಧವನಿಂದ ಬೃಹಸ್ಪತಿಗಳಿಗೆ ಬಂದು, ಬೃಹಸ್ಪತಿಗಳು ವಾಯುದೇವರ ಸಹಕಾರದಿಂದ ಆದಿದಂಪತಿಗಳ ಅನುಮೋದ ಪಡೆದು, ರುದ್ರತೀರ್ಥದ ಬಳಿ ಪ್ರತಿಷ್ಠಾಪಿಸಿದ ದಿವ್ಯ ತೇಜೋಮೂರ್ತಿ.

ಗುರುವಾಯೂರು ಪ್ರವೇಶಿಸಿದ ತಕ್ಷಣ ಮೊದಲಿಗೆ ಸಿಗುವುದು ಮಂಜುಲತಾರ ಅಶ್ವತ್ಥ ಮರ. ಕೆಳಗಡೆ ಇರುವುದು ಗರುಡ ದೇವರು, ಕುಚೇಲನೊಂದಿಗೆ. ಇದೇ ಮರದ ಕೆಳಗೆ ಅಲ್ಲವೇ ಪರಮ ಭಕ್ತೆ ಮಂಜುಳಾ ಅವರ ಹೂವಿನ ಹಾರದ ಪವಾಡವನ್ನು ಸರ್ವಾಂತರ್ಯಾಮಿ, ಭಕ್ತಾಧೀನನಾದ ಶ್ರೀಕೃಷ್ಣ ನಡೆಸಿದ್ದು ಎಂದು ನೆನೆದು, ಧನ್ಯತಾ ಭಾವದಿಂದ ಅಶ್ವತ್ಥ ಮರಕ್ಕೆ ಪ್ರದಕ್ಷಿಣೆ ನಮಸ್ಕಾರ ಸಲ್ಲಿಸಿ, ದೇಗುಲದ ಪ್ರಥಮ ದ್ವಾರದೆಡೆ ಪ್ರವೇಶ.



ಮುಕ್ತಿ ಮಾರ್ಗದ ಸೋಪಾನವಾಗಿರುವ ದ್ವಾದಶಾಕ್ಷರೀ ಮಂತ್ರ **"ಓಂ ನಮೋ ಭಗವತೇ ನಾರಾಯಣಾಯ"** ಎಂದು ಬಣ್ಣ ಬಣ್ಣದ ದೀಪಗಳಿಂದ ಕಂಗೊಳಿಸುತ್ತಿರುವ ಫಲಕ ಮತ್ತು ಅದರ ಮೇಲೆ ಸುಂದರ ಮಂಟಪದಲ್ಲಿ ವಿರಾಜಮಾನಳಾಗಿರುವ ವಿಷ್ಣು ಪತ್ನಿ ಶ್ರೀಲಕ್ಷ್ಮಿ.

ಸಮಸ್ತ ಸಂಪತ್ಸುಖದಾಂ ಮಹಾಶ್ರಿಯಂ ಸಮಸ್ತಸೌಭಾಗ್ಯಕರೀಂ ಮಹಾಶ್ರಿಯಮ್ ।

ಸಮಸ್ತಕಲ್ಯಾಣಕರೀಂ ಮಹಾಶ್ರಿಯಂ ಭಜಾಮ್ಯಹಂ ಜ್ಞಾನಕರೀಂ ಮಹಾಶ್ರಿಯಮ್ ॥

ಉದ್ದದ ಹಾದಿ, ಸಾಲು ಸಾಲಾಗಿ ಕಾಯುತ್ತಿರುವ ಭಕ್ತರ ಸಮೂಹ. ಹಾದಿಯ ಇಕ್ಕೆಡೆಯಲ್ಲಿ ನವಿಲುಗರಿ, ಕೃಷ್ಣ ಸುಂದರ ವಿಗ್ರಹ, ತಾವರೆ ಹೂವು, ತುಳಸಿ, ಮಲ್ಲಿಗೆ ಹೂವು, ಬಾಳೇಹಣ್ಣು, ಸೀರೆ, ಲಂಗ, ಸುಂದರ ವಿನ್ಯಾಸದ ದೀಪ, ಕಾಶೀದಾರ ತಾಯತ, ಬಣ್ಣ ಬಣ್ಣದ ಆಟಿಕೆ ಇತ್ಯಾದಿಗಳನ್ನೊಳಗೊಂಡ ಅಂಗಡಿಗಳು. ದೊಡ್ಡ ದೀಪ ಸ್ತಂಭ. ಸಾಕ್ಷಾತ್ ವೈಕುಂಠ ದ್ವಾರದಂತೆ ಪ್ರಜ್ವಲಿಸುತ್ತಿರುವ ಮಹಾದ್ವಾರ. ದಶಾವತಾರ ಮತ್ತು ಶ್ರೀಕೃಷ್ಣನ ಸುಂದರ ಭಂಗಿಗಳಿಂದ ಅಲಂಕೃತವಾದ ಕಂಬಗಳು. ಮೇಲ್ಪತ್ತೂರ್ ಸಭಾಂಗಣದಲ್ಲಿ ನೃತ್ಯಕ್ಕೆ ಸಜ್ಜಾಗುತ್ತಿರುವ ಮಕ್ಕಳ ಗೆಜ್ಜೆಯ ಘಲು ಘಲು ನಾದ. ದೂರದಿಂದ ಕೇಳಿಬರುತ್ತಿರುವ ನಾರಾಯಣೀಯಂ ಪಾರಾಯಣ. ಇಳಿಜಾರು ಛಾವಣಿಗಳು, ಸಂಕೀರ್ಣವಾದ ಮರದ ಕೆತ್ತನೆಯೊಂದಿಗೆ ಕೇರಳದ ಸಾಂಪ್ರದಾಯಿಕ ವಾಸ್ತುಶಿಲ್ಪ ಶೈಲಿಯಲ್ಲಿ ನಿರ್ಮಿಸಲಾದ, ದಕ್ಷಿಣದ ದ್ವಾರಕೆಯೆಂದೇ ಪ್ರಖ್ಯಾತಗೊಂಡಿರುವ ಶ್ರೀಕೋವಿಲ್- ಭೂವೈಕುಂಠ.

ಇಷ್ಟುದಿನ ಈ ವೈಕುಂಠ ಎಷ್ಟು ದೂರವೋ ಎನುತಲಿದ್ದೆ.

ದೃಷ್ಟಿಯಿಂದಲಿ ನಾನು ಕಂಡೆ ಸೃಷ್ಟಿಗೀಶನೇ ಶ್ರೀಶೇಷಶಾಯಿ.

ಪಿತುಃ ಸಿಸೃಕ್ಷಾನಿರತಸ್ಯ ಶಾಸನಾದ್ಭವತ್ತಪಸ್ಯಾಭಿರತಾ ದಶಾಪಿ ತೇ ।

ಪಯೋನಿಧಿಂ ಪಶ್ಚಿಮಮೇತ್ಯ ತತ್ತಟೇ ಸರೋವರಂ ಸಂದದೃಶುರ್ಮನೋಹರಮ್ ॥

ನಾರಾಯಣೀಯಂ ನಲ್ಲಿ ಪ್ರಚೇತಸರ ಕಥೆಯ ದಶಕದಲ್ಲಿ ಉಲ್ಲೇಖಿಸಲಾದ ರುದ್ರತೀರ್ಥ, ಸಾಕ್ಷಾತ್ ಪಾರ್ವತೀ ಪರಮೇಶ್ವರರು ತಪಸ್ಸನ್ನಾಚರಿಸಿದ ಪುಣ್ಯತೀರ್ಥ. ರುದ್ರತೀರ್ಥದಿಂದ ಪ್ರಸರಿಸುತ್ತಿರುವ ತಂಪಾದ ಗಾಳಿ. ಪಡಿಂಜರೆ ನಾಡದಿಂದ ಪ್ರವೇಶಿಸಿದ ತಕ್ಷಣ ಎರಡು ಗೋಪುರಗಳ ನಡುವೆ ಇರುವ ಚತುರಸ್ರಾಕಾರದ ಸ್ತಂಭಗಳನ್ನೊಳಗೊಂಡ ಸಭಾಂಗಣ.

ಸ್ತಂಭಗಳ ಮೇಲೆ ಶ್ರೀಶಂಕರಭಗವತ್ಪಾದರು, ಮುಂತಾದ ಮಹನೀಯರ ದೊಡ್ಡ ದೊಡ್ಡ ಬಿಳೀ ವಿಗ್ರಹಗಳು. ದೊಡ್ಡ ದೀಪಸ್ತಂಭ. ಮಧ್ಯದಲ್ಲಿ ಗೋಡೆಗಳೆಲ್ಲವೂ ದೀಪಗಳಿಂದ ಕಂಗೊಳಿಸುತ್ತಿರುವ ಚಟ್ಟಂಬಲಮ್. ಚಟ್ಟಂಬಲಮ್ ಸುತ್ತಲೂ ದೇವರ ದರ್ಶನಕ್ಕಾಗಿ ಕಾತುರರಾಗಿ ಕಾಯುತ್ತಿರುವ ಭಕ್ತರ ಸಾಲು. ಚಟ್ಟಂಬಲಮ್ ಸುತ್ತಲೂ ವಿಶಾಲವಾದ ಪ್ರದಕ್ಷಿಣಾ ಪಥ. ಪಥದಲ್ಲಿ ಭಕ್ತಿಯಿಂದ ಉರುಳು ಸೇವೆ ಸಲ್ಲಿಸುತ್ತಿರುವ ಭಕ್ತರು. ಅವರು ಪಥದಲ್ಲೇ ಉಳಿಯುವಂತೆ ಎಚ್ಚರದಿಂದ ಕಾಯುತ್ತಿರುವ ಪರಿವಾರದ ಸದಸ್ಯರು. ಪ್ರಾಂಗಣದಲ್ಲಿ ಭಜನೆ ಮಾಡುತ್ತಿರುವ ಭಕ್ತರ ಸಮೂಹ. ಬಾಳೆಹಣ್ಣು, ಸಕ್ಕರೆ, ಬೆಲ್ಲ, ತೆಂಗಿನಕಾಯಿಯ ತುಲಾಭಾರವನ್ನು ಪರಮಾತ್ಮನಿಗೆ ಅರ್ಪಿಸುತ್ತಿರುವ ದೊಡ್ಡ ತಕ್ಕಡಿಯ ಸುತ್ತ ಕಿಕ್ಕಿರಿದಿರುವ ಭಕ್ತರ ದಂಡು. ಸಂತಾನ ಭಾಗ್ಯ ಪಡೆದು, ಸಂಭ್ರಮವಾಗಿ ಅನ್ನಪ್ರಾಶನ ಮಾಡುತ್ತಿರುವ ಧನ್ಯ ಭಕ್ತರು. ಶ್ರೀಕೋವಿಲ್ ಮುಖ್ಯದ್ವಾರದ ಮುಂದೆ ದೊಡ್ಡ ಬಲಿಕ್ಕಲ್ ಮತ್ತು ಧ್ವಜಸ್ತಂಭ. ದೇಗುಲದ ಮುಖ್ಯದ್ವಾರದ ಮೇಲೆ ದ್ವಾರಪಾಲಕರೊಂದಿಗೆ ಶೋಭಿಸುತ್ತಿರುವ ಶ್ರೀಮಹಾಲಕ್ಷ್ಮಿ. ಹೊಸಿಲಿಗೆ ವಂದಿಸಿ ಒಳಗೆ ಪ್ರವೇಶಿಸುತ್ತಿರುವಂತೆಯೇ ನಾರಾಯಣ ಭಟ್ಟತಿರಿಯವರು ಕುಳಿತು ನಾರಾಯಣೀಯಂ ರಚಿಸಿದ ಪವಿತ್ರ ಸ್ಥಳವಿದು ಎಂದು ಸೂಚಿಸುತ್ತಿರುವ ಫಲಕ.

ವಂದೇ ಶ್ರೀಕೃಷ್ಣದೇವಂ ಮುರನರಕಭಿದಂ ವೇದವೇದಾಂತ ವೇದ್ಯಂ
ಲೋಕೇ ಭಕ್ತಿಪ್ರಸಿದ್ಧಂ ಯದುಕುಲಜಲಧೌ ಪ್ರಾದುರಾಸಿದಪಾರೇ ।
ಯಸ್ಯಾಸೀದ್ರೂಪಮೇವಂ ತ್ರಿಭುವನತರಣೇ ಭಕ್ತಿವಚ್ಚ ಸ್ವತಂತ್ರಂ
ಶಾಸ್ತ್ರಂ ರೂಪಂ ಚ ಲೋಕೇ ಪ್ರಕಟಯತಿಮುದಾ ಯಃ ಸನೋ ಭೂತಿಹೇತುಃ ॥

ಎದುರಿಗೆ, ಸ್ವರ್ಣ ಗರ್ಭಗೃಹದ ಒಳಗೆ ಮಂದವಾದ ದೀಪದ ಕಾಂತಿಯಲ್ಲಿ ಪ್ರಜ್ವಲಿಸುತ್ತಿರುವ ಶ್ರೀಕೃಷ್ಣ ಪರಮಾತ್ಮ. ಬ್ರಹ್ಮಾದಿ ದೇವತೆಗಳು ಅನಂತಾನಂದದಲ್ಲಿ ತಲ್ಲೀನರಾಗುವಂತೆ ಮಾಡಿದ ಪರಮಾತ್ಮನ ಪಾದಾರವಿಂದಗಳ ವೈಭವ. ಸರ್ವೋತ್ಕೃಷ್ಟವಾದ ಪರಮಾತ್ಮನ ಪಾದಭಕ್ತಿಯಿಂದ ನಮ್ಮ ಮನವನ್ನು ತುಂಬಿಸಿ, ಆನಂದಾಮೃತದಲ್ಲಿ ಮುಳುಗಿ ತಲ್ಲೀನವಾಗುವಂತೆ ಮಾಡುವ ನಾರಾಯಣೀಯಂ ನ ಭಗವದ್ರೂಪ ವರ್ಣನೆ ಮತ್ತು ಭಗವದ್ ಭಕ್ತಿಯ ಮಹಿಮೆ ದಶಕ.

ಸೂರ್ಯಸ್ಪರ್ಧಿಕಿರೀಟಮೂರ್ಧ್ವತಿಲಕಪ್ರೋದ್ಭಾಸಿಫಾಲಾಂತರಂ
ಕಾರುಣ್ಯಾಕುಲನೇತ್ರಮಾರ್ದ್ರಹಸಿತೋಲ್ಲಾಸಂ ಸುನಾಸಾಪುಟಮ್ ।
ಗಂಡೋದ್ಯನ್ಮಕರಾಭಕುಂಡಲಯುಗಂ ಕಂಠೋಜ್ಜ್ವಲತ್ಕೌಸ್ತುಭಂ
ತ್ವದ್ರೂಪಂ ವನಮಾಲ್ಯಹಾರಪಟಲಶ್ರೀವತ್ಸದೀಪ್ರಂ ಭಜೇ ॥ 1 ॥
ಕೇಯೂರಾಂಗದಕಂಕಣೋತ್ತಮಮಹಾರತ್ನಾಂಗುಲೀಯಾಂಕಿತ-
ಶ್ರೀಮದ್ಬಾಹುಚತುಷ್ಕಸಂಗತಗದಾಶಂಖಾರಿಪಂಕೇರುಹಾಮ್ ।
ಕಾಂಚಿತ್ಕಾಂಚನಕಾಂಚಿಲಾಂಛಿತಲಸತ್ಪೀತಾಂಬರಾಲಂಬಿನೀ-
ಮಾಲಂಬೇ ವಿಮಲಾಂಬುಜದ್ಯುತಿಪದಾಂ ಮೂರ್ತಿಂ ತವಾರ್ತಿಚ್ಛಿದಮ್ ॥ 2 ॥
ಯತ್ತ್ರೈಲೋಕ್ಯಮಹೀಯಸೋಽಪಿ ಮಹಿತಂ ಸಮ್ಮೋಹನಂ ಮೋಹನಾತ್
ಕಾಂತಂ ಕಾಂತಿನಿಧಾನತೋಽಪಿ ಮಧುರಂ ಮಾಧುರ್ಯಧುರ್ಯಾದಪಿ ।
ಸೌಂದರ್ಯೋತ್ತರತೋಽಪಿ ಸುಂದರತರಂ ತ್ವದ್ರೂಪಮಾಶ್ಚರ್ಯತೋ-
ಽಪ್ಯಾಶ್ಚರ್ಯಂ ಭುವನೇ ನ ಕಸ್ಯ ಕುತುಕಂ ಪುಷ್ಣಾತಿ ವಿಷ್ಣೋ ವಿಭೋ ॥ 3 ॥
ತತ್ತಾದೃಙ್ಮಧುರಾತ್ಮಕಂ ತವ ವಪುಃ ಸಂಪ್ರಾಪ್ಯ ಸಂಪನ್ಮಯೀ
ಸಾ ದೇವೀ ಪರಮೋತ್ಸುಕಾ ಚಿರತರಂ ನಾಸ್ತೇ ಸ್ವಭಕ್ತೇಷ್ವಪಿ ।
ತೇನಾಸ್ಯಾ ಬತ ಕಷ್ಟಮಚ್ಯುತ ವಿಭೋ ತ್ವದ್ರೂಪಮಾನೋಜ್ಞಕ-
ಪ್ರೇಮಸ್ಥೈರ್ಯಮಯಾದಚಾಪಲಬಲಾಚ್ಚಾಪಲ್ಯವಾರ್ತೋದಭೂತ್ ॥ 4 ॥
ಲಕ್ಷ್ಮೀಸ್ತಾವಕರಾಮಣೀಯಕಹೃತೈವೇಯಂ ಪರೇಷ್ವಸ್ಥಿರೇ-
ತ್ಯಸ್ಮಿನ್ನನ್ಯದಪಿ ಪ್ರಮಾಣಮಧುನಾ ವಕ್ಷ್ಯಾಮಿ ಲಕ್ಷ್ಮೀಪತೇ ।
ಯೇ ತ್ವದ್ಧ್ಯಾನಗುಣಾನುಕೀರ್ತನರಸಾಸಕ್ತಾ ಹಿ ಭಕ್ತಾ ಜನಾ-
ಸ್ತೇಷ್ವೇಷಾ ವಸತಿ ಸ್ಥಿರೈವ ದಯಿತಪ್ರಸ್ತಾವದತ್ತಾದರಾ ॥ 5 ॥
ಏವಂಭೂತಮನೋಜ್ಞತಾನವಸುಧಾನಿಷ್ಯಂದಸಂದೋಹನಂ
ತ್ವದ್ರೂಪಂ ಪರಚಿದ್ರಸಾಯನಮಯಂ ಚೇತೋಹರಂ ಶೃಣ್ವತಾಮ್ ।
ಸದ್ಯಃ ಪ್ರೇರಯತೇ ಮತಿಂ ಮದಯತೇ ರೋಮಾಂಚಯತ್ಯಂಗಕಂ

ವ್ಯಾಸಿಂಚತ್ಯಪಿ ಶೀತಬಾಷ್ಪವಿಸರೈರಾನಂದಮೂರ್ಛೋದ್ಭವೈಃ ॥ 6 ॥
ಏವಂಭೂತತಯಾ ಹಿ ಭಕ್ತ್ಯಭಿಹಿತೋ ಯೋಗಸ್ಸ ಯೋಗದ್ವಯಾತ್
ಕರ್ಮಜ್ಞಾನಮಯಾದ್ಭೃಶೋತ್ತಮತರೋ ಯೋಗೀಶ್ವರೈರ್ಗೀಯತೇ ।
ಸೌಂದರ್ಯೈಕರಸಾತ್ಮಕೇ ತ್ವಯಿ ಖಲು ಪ್ರೇಮಪ್ರಕರ್ಷಾತ್ಮಿಕಾ
ಭಕ್ತಿರ್ನಿಶ್ರಮಮೇವ ವಿಶ್ವಪುರುಷೈರ್ಲಭ್ಯಾ ರಮಾವಲ್ಲಭ ॥ 7 ॥
ನಿಷ್ಕಾಮಂ ನಿಯತಸ್ವಧರ್ಮಚರಣಂ ಯತ್ಕರ್ಮಯೋಗಾಭಿಧಂ
ತದ್ದೂರೇತ್ಯಫಲಂ ಯದೌಪನಿಷದಜ್ಞಾನೋಪಲಭ್ಯಂ ಪುನಃ ।
ತತ್ತ್ವವ್ಯಕ್ತತಯಾ ಸುದುರ್ಗಮತರಂ ಚಿತ್ತಸ್ಯ ತಸ್ಮಾದ್ವಿಭೋ
ತ್ವತ್ಪ್ರೇಮಾತ್ಮಕಭಕ್ತಿರೇವ ಸತತಂ ಸ್ವಾದೀಯಸೀ ಶ್ರೇಯಸೀ ॥ 8 ॥
ಅತ್ಯಾಯಾಸಕರಾಣಿ ಕರ್ಮಪಟಲಾನ್ಯಾಚರ್ಯ ನಿರ್ಯನ್ಮಲಾ
ಬೋಧೇ ಭಕ್ತಿಪಥೇಥವಾಪ್ಯುಚಿತತಾಮಾಯಾಂತಿ ಕಿಂ ತಾವತಾ ।
ಕ್ಲಿಷ್ಟ್ವಾ ತರ್ಕಪಥೇ ಪರಂ ತವ ವಪುರ್ಬ್ರಹ್ಮಾಖ್ಯಮನ್ಯೇ ಪುನ-
ಶ್ಚಿತ್ತಾರ್ದ್ರತ್ವಮೃತೇ ವಿಚಿಂತ್ಯ ಬಹುಭಿಸ್ಸಿದ್ಧ್ಯಂತಿ ಜನ್ಮಾಂತರೈಃ ॥ 9 ॥
ತ್ವದ್ಭಕ್ತಿಸ್ತು ಕಥಾರಸಾಮೃತಝುರೀನಿರ್ಮಜ್ಜನೇನ ಸ್ವಯಂ
ಸಿದ್ಧ್ಯಂತೀ ವಿಮಲಪ್ರಬೋಧಪದವೀಮಕ್ಲೇಶತಸ್ತನ್ವತೀ ।
ಸದ್ಯಸ್ಸಿದ್ಧಿಕರೀ ಜಯತ್ಯಯಿ ವಿಭೋ ಸೈವಾಸ್ತು ಮೇ ತ್ವತ್ಪದ-
ಪ್ರೇಮಪ್ರೌಢಿರಸಾರ್ದ್ರತಾ ದ್ರುತತರಂ ವಾತಾಲಯಾಧೀಶ್ವರ ॥ 10 ॥

ಸಾಲಿನಲ್ಲಿ ನಡೆಯುತ್ತಾ ಮುಂದಕ್ಕೆ ಸಾಗಿ ನಮಸ್ಕಾರ ಮಂಟಪದ ಮುಂದೆ ಬಂದು ನಿಂತಾಗ ಶ್ರೀಕೃಷ್ಣನ ಭವ್ಯ ದರ್ಶನ. ನಂಬೂದ್ರಿಗಳಿಂದ ಶಂಖುವಿನ ಮೂಲಕ ಪವಿತ್ರ ತೀರ್ಥದ ಪ್ರೋಕ್ಷಣೆ. ಸ್ವರ್ಣಮಯ ಶ್ರೀಕೋವಿಲ್ ನಲ್ಲಿ ದೇದೀಪ್ಯಮಾನವಾಗಿ ವಿರಾಜಿಸುತ್ತಿರುವ ದಿವ್ಯ ಕಿಶೋರ ಮೂರ್ತಿ. ಬಾಲ ಮುಕುಂದ, ಯಶೋದೆಯ ಕಂದ ಸುಂದರಾತಿ ಸುಂದರವಾಗಿ, ವನಮಾಲಾ ಭೂಷಿತನಾಗಿ ಮಂದಹಾಸ ಬೀರುತ್ತಾ ಮನೋಹರವಾಗಿ ಗೋಚರ. ವಿಶ್ವವೆಲ್ಲವೂ ವ್ಯಾಪಿಸಿ, ಅತೀತನಾಗಿ, ಅನಂತವಾದ ಶುದ್ಧಜ್ಞಾನ ವಿರಾಟ್ ಸ್ವರೂಪನಾದ ಶ್ರೀಮಹಾವಿಷ್ಣುವಿನ

ಸಾಕಾರ ಮೂರ್ತಿ. ನಾಲ್ಕು ಭುಜಗಳಲ್ಲಿ ಶಂಖ, ಚಕ್ರ ಗದಾ ಪದ್ಮ ವಿಭೂಷಿತನಾಗಿರುವ ರಮ್ಯ ರೂಪ. ಸುಂದರ ಶ್ಯಾಮಲ ಶರೀರದ ಮೇಲೆ ಶೋಭಿಸುತ್ತಿರುವ ದಿವ್ಯ ಪೀತಾಂಬರ. ಸರ್ವಾಂಗಗಳಿಂದ ಅಲೌಕಿಕವಾದ ಸೌಂದರ್ಯ ಸೂಸುತ್ತಿರುವ ಮುದ್ದು ಬಾಲಕ. ಭಕ್ತರ ಬಯಕೆಗಳನ್ನು ಪೂರೈಸುವ ಮಂಜೀರಗಳಿಂದ ವಿರಾಜಮಾನವಾಗಿರುವ ಪಾದ ಪದ್ಮಗಳ ದರ್ಶನ ಭಾಗ್ಯ. ನಿನ್ನ ಮಂಗಳಮಯ ನಾಮಗಳನ್ನು ಮತ್ತು ರೂಪಗಳನ್ನು ಶ್ರವಣಿಸುತ್ತಾ, ಕೀರ್ತಿಸುತ್ತಾ, ಸ್ಮರಿಸುತ್ತಾ, ಧ್ಯಾನಿಸುತ್ತಾ ಭಾಗವತ ಪಾರಾಯಣೆ ಮಾಡುತ್ತಿರುವುದಿಂದ ಅಲ್ಲವೇ ಈ ಭಾಗ್ಯ ಲಭಿಸಿದ್ದು ಎಂದು ಪುನಃ ಪುನಃ ಶ್ರೀಹರಿಯ ಚರಣ ಕಮಲಗಳಿಗೆ ವಂದಿಸುತ್ತಾ ನಾರಾಯಣೀಯಂನ ಕೇಶಾದಿ ಪಾದಾಂತ ರೂಪ ವರ್ಣನೆ ಎಂಬ ದಶಕ.

ಅಗ್ರೇ ಪಶ್ಯಾಮಿ ತೇಜೋ ನಿಬಿಡತರಕಲಾಯಾವಲೀಲೋಭನೀಯಂ
ಪೀಯೂಷಾಪ್ಲಾವಿತೋಽಹಂ ತದನು ತದುದರೇ ದಿವ್ಯಕೈಶೋರವೇಷಮ್ ।
ತಾರುಣ್ಯಾರಂಭರಮ್ಯಂ ಪರಮಸುಖರಸಾಸ್ವಾದರೋಮಾಂಚಿತಾಂಗೈ-
ರಾವೀತಂ ನಾರದಾದ್ಯೈವಿಲಸದುಪನಿಷತ್ಸುಂದರೀಮಂಡಲೈಶ್ಚ ॥ 1 ॥
ನೀಲಾಭಂ ಕುಂಚಿತಾಗ್ರಂ ಘನಮಮಲತರಂ ಸಂಯತಂ ಚಾರುಭಂಗ್ಯಾ
ರತ್ನೋತ್ತಂಸಾಭಿರಾಮಂ ವಲಯಿತಮುದಯಚ್ಚಂದ್ರಕೈಃ ಪಿಂಛಜಾಲೈಃ ।
ಮಂದಾರಸ್ರಜ್ನಿವೀತಂ ತವ ಪೃಥುಕಬರೀಭಾರಮಾಲೋಕಯೇಽಹಂ
ಸ್ನಿಗ್ಧಶ್ವೇತೋರ್ಧ್ವಪುಂಡ್ರಾಮಪಿ ಚ ಸುಲಲಿತಾಂ ಫಾಲಬಾಲೇಂದುವೀಥೀಮ್ ॥ 2 ॥
ಹೃದ್ಯಂ ಪೂರ್ಣಾನುಕಂಪಾರ್ಣವಮೃದುಲಹರೀಚಂಚಲಭ್ರೂವಿಲಾಸೈ-
ರಾನೀಲಸ್ನಿಗ್ಧಪಕ್ಷ್ಮಾವಲಿಪರಿಲಸಿತಂ ನೇತ್ರಯುಗ್ಮಂ ವಿಭೋ ತೇ ।
ಸಾಂದ್ರಚ್ಛಾಯಂ ವಿಶಾಲಾರುಣಕಮಲದಲಾಕಾರಮಾಮುಗ್ಧತಾರಂ
ಕಾರುಣ್ಯಾಲೋಕಲೀಲಾಶಿಶಿರಿತಭುವನಂ ಕ್ಷಿಪ್ಯತಾಂ ಮಯ್ಯನಾಥೇ ॥ 3 ॥
ಉತ್ತುಂಗೋಲ್ಲಾಸಿನಾಸಂ ಹರಿಮಣಿಮುಕುರಪ್ರೋಲ್ಲಸದ್ಗಂಡಪಾಲೀ-
ವ್ಯಾಲೋಲತ್ಕರ್ಣಪಾಶಾಂಚಿತಮಕರಮಣೀಕುಂಡಲದ್ವಂದ್ವದೀಪ್ರಮ್ ।
ಉನ್ಮೀಲದ್ದಂತಪಂಕ್ತಿಸ್ಫುರದರುಣತರಚ್ಛಾಯಬಿಂಬಾಧರಾಂತಃ-

ಪ್ರೀತಿಪ್ರಸ್ಯಂದಿಮಂದಸ್ಮಿತಮಧುರತರಂ ವಕ್ತ್ರಮುದ್ಭಾಸತಾಂ ಮೇ ॥ 4 ॥
ಬಾಹುದ್ವಂದ್ವೇನ ರತ್ನೋಜ್ಜ್ವಲವಲಯಭೃತಾ ಶೋಣಪಾಣಿಪ್ರವಾಲೇ-
ನೋಪಾತ್ತಾಂ ವೇಣುನಾಲೀಂ ಪ್ರಸೃತನಖಮಯೂಖಾಂಗುಲೀಸಂಗಶಾರಾಮ್ ।
ಕೃತ್ವಾ ವಕ್ತ್ರಾರವಿಂದ್ರೇ ಸುಮಧುರವಿಕಸದ್ರಾಗಮುದ್ಭಾವ್ಯಮಾನ್ಯೈಃ
ಶಬ್ದಬ್ರಹ್ಮಾಮೃತೈಸ್ತ್ವಂ ಶಿಶಿರಿತಭುವನೈಸ್ಸಿಂಚಮೇ ಕರ್ಣವೀಥೀಮ್ ॥ 5 ॥
ಉತ್ಸರ್ಪತ್ಕೌಸ್ತುಭಶ್ರೀತತಿಭಿರರುಣಿತಂ ಕೋಮಲಂ ಕಂಠದೇಶಂ
ವಕ್ಷಃ ಶ್ರೀವತ್ಸರಮ್ಯಂ ತರಲತರಸಮುದ್ದೀಪ್ರಹಾರಪ್ರತಾನಮ್ ।
ನಾನಾವರ್ಣಪ್ರಸೂನಾವಲಿಕಿಸಲಯಿನೀಂ ವನ್ಯಮಾಲಾಂ ವಿಲೋಲ-
ಲ್ಲೋಲಂಬಾಂ ಲಂಬಮಾನಾಮುರಸಿ ತವ ತಥಾ ಭಾವಯೇ ರತ್ನಮಾಲಾಮ್ ॥ 6 ॥
ಅಂಗೇಪಂಚಾಂಗರಾಗೈರತಿಶಯವಿಕಸತ್ಸೌರಭಾಕೃಷ್ಟಲೋಕಂ
ಲೀನಾನೇಕತ್ರಿಲೋಕೀವಿತತಿಮಪಿ ಕೃಶಾಂ ಬಿಭ್ರತಂ ಮಧ್ಯವಲ್ಲೀಮ್ ।
ಶಕ್ರಾಶ್ಮನ್ಯಸ್ತತಪ್ತೋಜ್ವಲಕನಕನಿಭಂ ಪೀತಚೇಲಂ ದಧಾನಂ
ಧ್ಯಾಯಾಮೋ ದೀಪ್ತರಶ್ಮಿಸ್ಫುಟಮಣಿರಶನಾಕಿಂಕಿಣೀಮಂಡಿತಂ ತ್ವಾಮ್ ॥ 7 ॥
ಊರೂ ಚಾರೂ ತವೋರೂ ಘನಮಸೃಣರುಚೌ ಚಿತ್ತಚೋರೌ ರಮಾಯಾಃ
ವಿಶ್ವಕ್ಷೋಭಂ ವಿಶಂಕ್ಯ ಧ್ರುವಮನಿಶಮುಭೌ ಪೀತಚೇಲಾವೃತಾಂಗೌ ।
ಆನಮ್ರಾಣಾಂ ಪುರಸ್ತಾನ್ನ್ಯಸನಧೃತಸಮಸ್ತಾರ್ಥಪಾಲೀಸಮುದ್ಗ-
ಚ್ಛಾಯಂ ಜಾನುದ್ವಯಂ ಚ ಕ್ರಮಪೃಥುಲಮನೋಜ್ಞೇ ಚ ಜಂಘೇ ನಿಷೇವೇ ॥ 8 ॥
ಮಂಜೀರಂ ಮಂಜುನಾದೈರಿವ ಪದಭಜನಂ ಶ್ರೇಯ ಇತ್ಯಾಲಪಂತಂ
ಪಾದಾಗ್ರಂ ಭ್ರಾಂತಿಮಜ್ಜತ್ಪ್ರಣತಜನಮನೋಮಂದರೋದ್ಧಾರಕೂರ್ಮಮ್ ।
ಉತ್ತುಂಗಾತಾಮ್ರರಾಜನ್ನಖರಹಿಮಕರಜ್ಯೋತ್ಸ್ನಯಾ ಚಾಶ್ರಿತಾನಾಂ
ಸಂತಾಪಧ್ವಾಂತಹಂತ್ರೀಂ ತತಿಮನುಕಲಯೇ ಮಂಗಲಾಮಂಗುಲೀನಾಮ್ ॥ 9 ॥
ಯೋಗೀಂದ್ರಾಣಾಂ ತ್ವದಂಗೇಷ್ವಧಿಕಸುಮಧುರಂ ಮುಕ್ತಿಭಾಜಾಂ ನಿವಾಸೋ
ಭಕ್ತಾನಾಂ ಕಾಮವರ್ಷದ್ಯುತರುಕಿಸಲಯಂ ನಾಥ ತೇ ಪಾದಮೂಲಮ್ ।

ನಿತ್ಯಂ ಚಿತ್ತಸ್ಥಿತಂ ಮೇ ಪವನಪುರಪತೇ ಕೃಷ್ಣ ಕಾರುಣ್ಯಸಿಂಧೋ
ಹೃತ್ವಾ ನಿಃಶೇಷತಾಪಾನ್ಪ್ರದಿಶತು ಪರಮಾನಂದಸಂದೋಹಲಕ್ಷ್ಮೀಮ್ ॥ 10 ॥
ಅಜ್ಞಾತ್ವಾ ತೇ ಮಹತ್ತ್ವಂ ಯದಿಹ ನಿಗದಿತಂ ವಿಶ್ವನಾಥ ಕ್ಷಮೇಥಾಃ
ಸ್ತೋತ್ರಂ ಚೈತತ್ಸಹಸ್ರೋತ್ತರಮಧಿಕತರಂ ತ್ವತ್ಪ್ರಸಾದಾಯ ಭೂಯಾತ್ ।
ದ್ವೇಧಾ ನಾರಾಯಣೀಯಂ ಶ್ರುತಿಷು ಚ ಜನುಷಾ ಸ್ತುತ್ಯತಾವರ್ಣನೇನ
ಸ್ಫೀತಂ ಲೀಲಾವತಾರೈರಿದಮಿಹ ಕುರುತಾಮಾಯುರಾರೋಗ್ಯಸೌಖ್ಯಮ್ ॥ 11 ॥

ಜಯ ಜನಾರ್ದನಾ ಕೃಷ್ಣಾ ರಾಧಿಕಾಪತೇ
ಜನವಿಮೋಚನಾ ಕೃಷ್ಣಾ ಜನ್ಮಮೋಚನಾ ।
ಗರುಡವಾಹನಾ ಕೃಷ್ಣಾ ಗೋಪಿಕಾಪತೇ
ನಯನಮೋಹನಾ ಕೃಷ್ಣಾ ನೀರಜೇಕ್ಷಣಾ ॥

ಅಭಿಷೇಕದ ನಂತರ ಮುದ್ದು ಮುದ್ದಾಗಿ ಸರ್ವಾಂಗವೂ ಗಂಧಲೇಪಿತ ಶ್ರೀಕೃಷ್ಣನನ್ನು ಸ್ಮರಿಸುತ್ತಾ, ಧ್ಯಾನಿಸುತ್ತಾ ಸಾಲಿನಲ್ಲಿ ನಡೆಯುತ್ತಿರುವಾಗ ಚಟ್ಟಂಬಲಮ್ ನ ಒಂದು ಮೂಲೆಯಲ್ಲಿ ಗುರು ಮತ್ತು ವಾಯು ವಿಗ್ರಹವನ್ನು ಪ್ರತಿಷ್ಠಾಪಿಸಿದ ಕಾಲದಿಂದಲೂ ಇರುವ ಪುರಾತನ ಪವಿತ್ರ ಬಾವಿ. ಈ ಬಾವಿಯ ನೀರೇ ಅಲ್ಲವೇ ಪರಮಾತ್ಮನ ಅಭಿಷೇಕ ಭಾಗ್ಯವನ್ನು ಪಡೆದಿರುವುದು ಎಂದು ಬಾವಿಗೆ, ಬಾವಿಯಲ್ಲಿರುವ ಜಲಕ್ಕೆ ಪ್ರಣಾಮ ಸಲ್ಲಿಸುತ್ತಾ ಪಕ್ಕದಲ್ಲಿ ದೇವರಿಗೆ ನಿವೇದಿಸುವ ಪಾಲ್ ಪಾಯಸಮ್, ನೇಯಿ ಪಾಯಸಮ್, ಶರ್ಕರ ಪಾಯಸಮ್, ವೆಲ್ಲ ನೈವೇದ್ಯಂ, ಅಪ್ಪಂ, ಅಡ, ಅವಿಲ್ ಮುಂತಾದವನ್ನು ತಯಾರಿಸುವ ತಿಡಪ್ಪಲ್ಲಿಯಲ್ಲಿ ನಡೆದಿರುವ ಗಣಹೋಮದ ರಕ್ಷೆಗೆ ವಂದನೆ.

ಪ್ರಾತಃ ಸ್ಮರಾಮಿ ಗಣನಾಥಮನಾಥಬಂಧುಂ
ಸಿಂದೂರಪೂರ ಪರಿಶೋಭಿತಗಂಡಯುಗ್ಮಮ್ ।
ಉದ್ದಂಡ ವಿಘ್ನಪರಿಖಂಡನ ಚಂಡದಂಡಂ
ಆಖಂಡಲಾದಿಸುರನಾಯಕ ಬೃಂದವಂದ್ಯಮ್ ॥

ನೈಋತ್ಯ ಮೂಲೆಯಲ್ಲಿರುವ ಉಪದೇಗುಲದಲ್ಲಿ ನೆಲೆಸಿರುವ ವಿಘ್ನನಿವಾರಕನಿಗೆ ನಮಸ್ಕಾರ ಮಾಡಿ, ಗಂಧಾಕ್ಷತೆ ಪ್ರಸಾದ ಸ್ವೀಕರಿಸಿ, ಚಟ್ಟಂಬಲಮ್ ನ ಪ್ರಾಕಾರದ ಸ್ತಂಭಗಳಲ್ಲಿ ಮೂಡಿಸಿರುವ ಮತ್ಸ್ಯ, ಕೂರ್ಮ, ವರಾಹ, ನಾರಸಿಂಹ, ವಾಮನ, ಪರಶುರಾಮ, ಶ್ರೀರಾಮ, ಬಲರಾಮ, ಶ್ರೀಕೃಷ್ಣ, ಕಲ್ಕಿ, ಗಣಪತಿ, ಸ್ಕಂಧ, ದುರ್ಗಾದೇವಿ, ಆಂಜನೇಯ, ಅನಂತ ಪದ್ಮನಾಭಸ್ವಾಮಿಯ ವಿಗ್ರಹಗಳಿಗೆ ವಂದಿಸುತ್ತಾ, ಆ ಅವತಾರ ಲೀಲಾ ವಿಶೇಷಗಳನ್ನು ಸ್ಮರಿಸುತ್ತಾ, ತುಳಸೀಮಾಲೆ, ಹೂಮಾಲೆಗಳನ್ನು ಹಾಕುತ್ತಾ, ನೆರೆದಿರುವ ಭಕ್ತರ ಜೊತೆಗೆ ನಾವೂ ಎಲ್ಲ ದೇವರನ್ನೂ ಪೂಜಿಸಿ, ಶ್ರೀಕೋವಿಲ್ ಸುತ್ತಲೂ ಕೃಷ್ಣ ಜನನ, ಪೂತನಾ ಸಂಹಾರ, ಉಲೂಖ ಬಂಧನ, ವಿಶ್ವರೂಪ ದರ್ಶನ, ರಾಸಕ್ರೀಡೆ ಮುಂತಾದ ಸುಂದರ ಸನ್ನಿವೇಶಗಳನ್ನು ನೋಡಿ ನಾವೂ ಸಹ ದ್ವಾಪರಯುಗದಲ್ಲಿ ಇರುವಂತೆ ಭಾವಿಸುತ್ತಾ, ಕೃಷ್ಣನ ಸಂಗ ಸುಖವನ್ನು ಮಾನಸಿಕವಾಗಿ ಅನುಭವಿಸುತ್ತಾ ಆನಂದಿಸುತ್ತಾ ಶ್ರೀಕೋವಿಲ್ ನ ಮೂರು ದಿಕ್ಕುಗಳಲ್ಲಿಯೂ ಮೂಡಿಸಿರುವ ಅಯ್ಯಪ್ಪ ಸ್ವಾಮಿ, ನರಸಿಂಹ ಸ್ವಾಮಿ, ಶ್ರೀಮಹಾವಿಷ್ಣುವಿನ ಸುಂದರ ವಿಗ್ರಹಗಳ ಭವ್ಯತೆಯನ್ನು ನೋಡಿ ಆನಂದಿಸುತ್ತಾ, ಚಟ್ಟಂಬಲಮ್ ನಿಂದ ಆಚೆ ಬಂದು, ಬಾಹ್ಯಾಂಗಣದಲ್ಲಿ ಪ್ರಸಾದ ವಿತರಣೆ ಆಗುತ್ತಿರುವ ಸ್ಥಳದಲ್ಲಿ ತೀರ್ಥ, ಗಂಧಗಳ ಜೊತೆಗೆ ಸಕಲ ರೋಗಹರ, ಪರಮ ಪವಿತ್ರ ಶ್ರೀಕೃಷ್ಣನ ಮಜ್ಜನದ ಪ್ರಸಾದವಾದ ಆದಿಯ ಎಣ್ಣೆ, ವಾಕಾಪುಡಿ ಮಿಶ್ರಣವನ್ನು ಸ್ವೀಕರಿಸಿ, ಪ್ರಾಂಗಣದಲ್ಲಿ ಸಾವಕಾಶವಾಗಿ ಕುಳಿತು ದೇವರ ದರ್ಶನವನ್ನು ಮೆಲುಕು ಹಾಕುತ್ತಾ, ಸಾಕ್ಷಾತ್ ಶ್ರೀಶಂಕರಭಗವತ್ಪಾದರಲ್ಲವೇ ಇಲ್ಲಿಯ ಪೂಜಾ ವಿಧಾನಗಳನ್ನು ರೂಪುಗೊಳಿಸಿದ್ದು ಎಂದು ಸದ್ಗುರುಗಳನ್ನು ನೆನೆಯುತ್ತಾ ಮಾಡಿದ ಸದ್ಗುರು ವಿರಚಿತ ಭಗವನ್ ಮಾನಸಿಕ ಪೂಜಾ.

ಹೃದಂಭೋಜೇ ಕೃಷ್ಣಃ ಸಜಲಜಲದಶ್ಯಾಮಲ ತನುಃ
ಸರೋಜಾಕ್ಷಃ ಸ್ರಗ್ವೀ ಮುಕುಟಕಟಕಾದ್ಯಾಭರಣವಾನ್ ।
ಶರದ್ರಾಕಾನಾಥಪ್ರತಿಮವದನಃ ಶ್ರೀಮುರಳಿಕಾಂ
ವಹನ್ ಧ್ಯೇಯೋ ಗೋಪೀಗಣಪರಿವೃತಃ ಕುಂಕುಮಚಿತಃ ॥
ಪಯೋಂಭೋರ್ಧೇದ್ವೀಪಾನ್ಮಮಹೃದಯಮಾಯಾಹಿ ಭಗವನ್
ಮಣಿವ್ರಾತಭ್ರಾಜತ್ಕನಕವರಪೀಠಂ ಭಜ ಹರೇ ।

ಸುಚಿಹ್ನೌ ತೇ ಪಾದೌ ಯದುಕುಲಜನೇನೇಜ್ಮಿ ಸುಜಲೈಃ
ಗೃಹಾಣೇದಂ ದೂರ್ವಾದಲಜಲವದರ್ಘ್ಯಂ ಮುರರಿಪೋ ॥
ತ್ವಮಾಚಾಮೋಪೇಂದ್ರ ತ್ರಿದಶಸರಿದಂಭೋತಿಶಿಶಿರಂ
ಭಜಸ್ವೇಮಂ ಪಂಚಾಮೃತಫಲರಸಾಪ್ಲಾವಮಘಹನ್ ।
ದ್ಯುನದ್ಯಾಃ ಕಾಲಿಂದ್ಯಾ ಅಪಿಕನಕಕುಂಭಸ್ಥಿತಮಿದಂ
ಜಲಂ ತೇನ ಸ್ನಾನಂ ಕುರುಕುರು ಕುರುಷ್ವಾಚಮನಕಮ್ ॥
ತಡಿದ್ವರ್ಣೇ ವಸ್ತ್ರೇ ಭಜವಿಜಯಕಾಂತಾಧಿಹರಣ
ಪ್ರಲಂಬಾರಿಭ್ರಾತರ್ಮೃದುಲಮುಪವೀತಂ ಕುರು ಗಲೇ ।
ಲಲಾಟೇ ಪಾಟೀರಂ ಮೃಗಮದಯುತಂ ಧಾರಯ ಹರೇ
ಗೃಹಾಣೇದಂ ಮಾಲ್ಯಂ ಶತದಲತುಲಸ್ಯಾದಿರಚಿತಂ ॥
ದಶಾಂಗಂ ಧೂಪಂ ಸದ್ವರದಚರಣಾಗ್ರೇರ್ಪಿತಮಿದಂ
ಮುಖಂ ದೀಪೇನೇಂದುಪ್ರಭವಿರಜಸಂ ದೇವ ಕಲಯೇ ।
ಇಮೌ ಪಾಣೀ ವಾಣೀಪತಿನುತಸಕರ್ಪೂರರಜಸಾ
ವಿಶೋಧ್ಯಾಗ್ರೇ ದತ್ತಂ ಸಲಿಲಮಿದಮಾಚಾಮನೃಹರೇ ॥
ಸದಾ ತೃಪ್ತಾನ್ನಂ ಷಡ್ರಸವದಖಿಲವ್ಯಂಜನಯುತಂ
ಸುವರ್ಣಾಮತ್ರೇ ಗೋಘೃತಚಷಕಯುಕ್ತೇ ಸ್ಥಿತಮಿದಂ ।
ಯಶೋದಾಸೂನೋ ತತ್ಪರಮದಯಯಾಶಾನ ಸಖಿಭಿಃ
ಪ್ರಸಾದಂ ವಾಂಛದ್ಭಿಃ ತದನು ನೀರಂ ಪಿಬ ವಿಭೋ ॥
ಸಚೂರ್ಣಂ ತಾಂಬೂಲಂ ಮುಖರುಚಿಕರಂ ಭಕ್ಷಯ ಹರೇ
ಫಲಂ ಸ್ವಾದು ಪ್ರೀತ್ಯಾ ಪರಿಮಳವದಾಸ್ವಾದಯ ಚಿರಂ ।
ಸಪರ್ಯಾಪರ್ಯಾಪ್ತ್ಯೈ ಕನಕಮಣಿಜಾತಂ ಸ್ಥಿತಮಿದಂ
ಪ್ರದೀಪೈರಾರಾರ್ತಿಂ ಜಲಧಿತನಯಾಶ್ಲಿಷ್ಟ ರಚಯೇ ॥
ವಿಜಾತೀಯೈಃ ಪುಷ್ಪೈರಭಿಸುರಭಿಭಿರ್ಬಿಲ್ವತುಲಸೀ

ಯುತೈಶ್ಚೇಮಂ ಪುಷ್ಪಾಂಜಲಿಮಜಿತ ತೇ ಮೂರ್ಧ್ನಿ ನಿದಧೇ ।
ತವ ಪ್ರಾದಕ್ಷಿಣ್ಯಕ್ರಮಣಮಘವಿಧ್ವಂಸಿರಚಿತಂ
ಚತುರ್ವಾರಂ ವಿಷ್ಣೋ ಜನಿಪಥಗತೇಶ್ಚಾಂತವಿದುಷಾ ॥
ನಮಸ್ಕಾರೋಷ್ಟಾಂಗಃ ಸಕಲ ದುರಿತಧ್ವಂಸನಪಟುಃ
ಕೃತಂ ನೃತ್ಯಂ ಗೀತಂ ಸ್ತುತಿರಪಿ ರಮಾಕಾಂತ ತ ಇಮಮ್ ।
ತವ ಪ್ರೀತ್ಯೈ ಭೂಯಾದಹಮಪಿ ಚ ದಾಸಸ್ತವ ವಿಭೋ
ಕೃತಂ ಛಿದ್ರಂ ಪೂರ್ಣಂ ಕುರುಕುರು ನಮಸ್ತೇಸ್ತು ಭಗವನ್ ॥
ಸದಾ ಸೇವ್ಯಃ ಕೃಷ್ಣಃ ಸಜಲಘನನೀಲಃ ಕರತಲೇ
ದಧಾನೋ ದಧ್ಯನ್ನಂ ತದನು ನವನೀತಂ ಮುರಲಿಕಾಂ ।
ಕದಾಚಿತ್ಕಾಂತಾನಾಂ ಕುಚಕಲಶಪತ್ರಾಲಿರಚನಾ -
ಸಮಾಸಕ್ತಃ ಸ್ನಿಗ್ಧೈಃ ಸಹ ಶಿಶುವಿಹಾರಂ ವಿರಚಯನ್ ॥
ಮಣಿಕರ್ಣೇಚ್ಛಯಾ ಜಾತಮಿದಂ ಮಾನಸಪೂಜನಂ ।
ಯಃ ಕುರ್ವೀತೋಷಸಿ ಪ್ರಾಜ್ಞಸ್ತಸ್ಯ ಕೃಷ್ಣಃ ಪ್ರಸೀದತಿ ॥

ವಿಪ್ರಪೂಜ್ಯಂ ವಿಶ್ವವಂದ್ಯಂ ವಿಷ್ಣುಶಂಭೋಃ ಪ್ರಿಯಂ ಸುತಮ್ ।
ಕ್ಷಿಪ್ರ ಪ್ರಸಾದ ನಿರತಂ ಶಾಸ್ತಾರಂ ಪ್ರಣಮಾಮ್ಯಹಂ ॥

ಶೈವ ಮತ್ತು ವೈಷ್ಣವ ಧರ್ಮದ ನಡುವಿನ ಸೇತುವೆಯಂತಿರುವ, ಸತ್ಯ ಮತ್ತು ನೀತಿಯ ದೇವರೆಂದೇ ಪ್ರಸಿದ್ಧಿಗೊಂಡಿರುವ ಶಿವ ಮತ್ತು ಮೋಹಿನೀ ಅವತಾರದಲ್ಲಿರುವ ವಿಷ್ಣುವಿನ ಮಗನಾದ ಹರಿಹರಸುತ ಅಯ್ಯಪ್ಪಸ್ವಾಮಿಯ ಉಪದೇವಾಲಯ. ಮಾತೆಯನ್ನು ಬಿಟ್ಟಿರಲಾಗದೇ ತಾಯಿಯ ಪಕ್ಕದಲ್ಲಿ ಮುದ್ದು ಮುದ್ದಾಗಿ ಕುತ್ತಿಗೆಗೆ ಗಂಟೆಯನ್ನು ಧರಿಸಿ, ಯೋಗಭಂಗಿಯಲ್ಲಿ ಕುಳಿತ ಅಯ್ಯಪ್ಪ ಸ್ವಾಮಿಯ ದರ್ಶನ. ಶಬಲಿಮಲೈಗೆ ಹೋಗುವ ಭಕ್ತರೆಲ್ಲಾ ಮೊದಲು ಬಂದು, ಮಾತೆಯ ಸಂಗಡವಿರುವ ಅಯ್ಯಪ್ಪನಿಗೆ ವಂದಿಸಿ, ಮುಡುಪು ಸಲ್ಲಿಸಿ ನಂತರ ಯಾತ್ರೆಯನ್ನು ಮುಂದುವರಿಸುವ ಪ್ರತೀತಿ.

ಜ್ವಾಲಾಕರಾಲಮತ್ಯುಗ್ರಮಶೇಷಾಸುರಸೂದನಮ್ ।

ತ್ರಿಶೂಲಂ ಪಾತುನೋ ಭೀತೇರ್ಭದ್ರಕಾಲಿ ನಮೋಸ್ತುತೇ ॥

ಪಕ್ಕದಲ್ಲಿ ಮಹಾಕಾಳಿಯ ಬಲಿಕ್ಕಲ್. ಶರಣಾಗತ ವತ್ಸಲನೆಂದೇ ಪ್ರಖ್ಯಾತಿಗೊಂಡಿರುವ ಅಯ್ಯಪ್ಪಸ್ವಾಮಿಯ ಹರಿಹರಾಷ್ಟಕಮ್.

ಶರಣಂ ಅಯ್ಯಪ್ಪಾ ಸ್ವಾಮಿ ಶರಣಂ ಅಯ್ಯಪ್ಪಾ ।

ಶರಣಂ ಅಯ್ಯಪ್ಪಾ ಸ್ವಾಮಿ ಶರಣಂ ಅಯ್ಯಪ್ಪಾ ॥

ಹರಿವರಾಸನಂ ವಿಶ್ವಮೋಹನಂ ಹರಿದಧೀಶ್ವರಂ ಆರಾಧ್ಯಪಾದುಕಮ್ ।

ಅರಿವಿಮರ್ದನಂ ನಿತ್ಯನರ್ತನಂ ಹರಿಹರಾತ್ಮಜಂ ದೇವಮಾಶ್ರಯೇ ॥ 1 ॥

ಶರಣಕೀರ್ತನಂ ಭಕ್ತಮಾನಸಂ ಭರಣಲೋಲುಪಂ ನರ್ತನಾಲಸಮ್ ।

ಅರುಣಭಾಸುರಂ ಭೂತನಾಯಕಂ ಹರಿಹರಾತ್ಮಜಂ ದೇವಮಾಶ್ರಯೇ ॥ 2 ॥

ಪ್ರಣಯಸತ್ಯಕಂ ಪ್ರಾಣನಾಯಕಂ ಪ್ರಣತಕಲ್ಪಕಂ ಸುಪ್ರಭಾಂಚಿತಮ್ ।

ಪ್ರಣವಮಂದಿರಂ ಕೀರ್ತನಪ್ರಿಯಂ ಹರಿಹರಾತ್ಮಜಂ ದೇವಮಾಶ್ರಯೇ ॥ 3 ॥

ತುರಗವಾಹನಂ ಸುಂದರಾನನಂ ವರಗದಾಯುಧಂ ವೇದವರ್ಣಿತಮ್ ।

ಗುರುಕೃಪಾಕರಂ ಕೀರ್ತನಪ್ರಿಯಂ ಹರಿಹರಾತ್ಮಜಂ ದೇವಮಾಶ್ರಯೇ ॥ 4 ॥

ತ್ರಿಭುವನಾರ್ಚಿತಂ ದೇವತಾತ್ಮಕಂ ತ್ರಿನಯನಪ್ರಭುಂ ದಿವ್ಯದೇಶಿಕಮ್ ।

ತ್ರಿದಶಪೂಜಿತಂ ಚಿಂತಿತಪ್ರದಂ ಹರಿಹರಾತ್ಮಜಂ ದೇವಮಾಶ್ರಯೇ ॥ 5 ॥

ಭವಭಯಾಪಹಂ ಭಾವುಕಾವಕಂ ಭುವನಮೋಹನಂ ಭೂತಿಭೂಷಣಮ್ ।

ಧವಳವಾಹನಂ ದಿವ್ಯವಾರಣಂ ಹರಿಹರಾತ್ಮಜಂ ದೇವಮಾಶ್ರಯೇ ॥ 6 ॥

ಕಳಮೃದುಸ್ಮಿತಂ ಸುಂದರಾನನಂ ಕಳಭಕೋಮಲಂ ಗಾತ್ರಮೋಹನಮ್ ।

ಕಳಭಕೇಸರೀವಾಜಿವಾಹನಂ ಹರಿಹರಾತ್ಮಜಂ ದೇವಮಾಶ್ರಯೇ ॥ 7 ॥

ಶ್ರಿತಜನಪ್ರಿಯಂ ಚಿಂತಿತಪ್ರದಂ ಶ್ರುತಿವಿಭೂಷಣಂ ಸಾಧುಜೀವನಮ್ ।

ಶ್ರುತಿಮನೋಹರಂ ಗೀತಲಾಲಸಂ ಹರಿಹರಾತ್ಮಜಂ ದೇವಮಾಶ್ರಯೇ ॥ 8 ॥

ಶರಣಂ ಅಯ್ಯಪ್ಪಾ ಸ್ವಾಮಿ ಶರಣಂ ಅಯ್ಯಪ್ಪಾ ।

ಶರಣಂ ಅಯ್ಯಪ್ಪಾ ಸ್ವಾಮಿ ಶರಣಂ ಅಯ್ಯಪ್ಪಾ ॥

ಶಿವೇಲಿ, ಶ್ರೀಬಲಿ - ಆನೆಗಳನ್ನು ಪೂಜಿಸುವ ಗಜಪೂಜೆ ಮತ್ತು ಆನೆಗಳಿಗೆ ಅಂದರೆ ಸಾಕ್ಷಾತ್ ಗಣೇಶನಿಗೆ ನೈವೇದ್ಯವಾಗಿ ಆಹಾರವನ್ನು ಕೊಡುವ, ಆನೆಯೊಟ್ಟು ಆಚರಣೆಯಿರುವ ಶ್ರೀಕೋವಿಲ್ ನಲ್ಲಿ, ಜಗನ್ನಾಥನು ಗರ್ಭಗೃಹದಿಂದ ಹೊರಗೆ ಬಂದು, ಗಜಾರೋಹಣ ಮಾಡಿ, ತನ್ನ ನೇರ ಪರ್ಯವೇಕ್ಷಣೆಯಲ್ಲಿ ಎಲ್ಲ ದೇವತಾ ಪರಿವಾರಕ್ಕೆ ಬಲಿ ಸಮರ್ಪಣೆ ಮಾಡುವ ಅಲೌಕಿಕ ಆಚರಣೆ. ಶ್ರೀಕೋವಿಲ್ ನ ಒಳಗೆ ನಾವು ಪರಮಾತ್ಮನನ್ನು ನೋಡುವ ಸಮಯ ಕೆಲವು ಕ್ಷಣಗಳು ಮಾತ್ರ. ಇಲ್ಲಿ ಬಾಹ್ಯಾಂಕಣದಲ್ಲಿ ದೇವಾಧಿದೇವನು ತನ್ನ ಪರಿವಾರವನ್ನು ಪರ್ಯವೇಕ್ಷಿಸುವ ಸಮಯದಲ್ಲಿ, ನಮಗೂ ಅವನನ್ನು ಕಣ್ತುಂಬಾ ನೋಡುವ, ನಮ್ಮ ಅಹವಾಲುಗಳನ್ನು ಅವನೊಂದಿಗೆ ನಿಧಾನವಾಗಿ ನಡೆಯುತ್ತಾ, ವಿನಂತಿಸಿಕೊಳ್ಳುತ್ತಾ, ಅವನ ಸನ್ನಿಧಿಯಲ್ಲಿ ಇರುವ ಅದ್ಭುತ ಅವಕಾಶ. ಪರಮಾತ್ಮನ ನೇರ ಪರ್ಯವೇಕ್ಷಣೆ ನಮಗೂ ದೊರೆಯುವ ವಿಶಿಷ್ಟ ಸಮಯ. ಅಖಿಲಾಂಡಕೋಟಿ ಬ್ರಹ್ಮಾಂಡನಾಯಕ ಸರ್ವಾಲಂಕೃತ ಸುವರ್ಣ ಉತ್ಸವಮೂರ್ತಿಯಾಗಿ ಬಾಹ್ಯಾಂಕಣಕ್ಕೆ ಬಂದ ನಂತರ ಅಲ್ಲಿ ತಗಾಗಿ ವಂದಿಸುತ್ತಾ ಕಾಯುತ್ತಿರುವ ಗಜರಾಜನ ಮೇಲೆ ನಂಬೂದ್ರಿಗಳೊಂದಿಗೆ ಕುಳಿತು ಠೀವಿಯಿಂದ ಕೊಂಬು, ಕಹಳೆ, ತಾಳ, ಮೇಳ, ಧೂಪ, ದೀಪಗಳೊಂದಿಗೆ ಪ್ರದಕ್ಷಿಣಾ ಪಥದಲ್ಲಿ ತನ್ನ ಭಕ್ತಾದಿಗಳೊಂದಿಗೆ ಚಲಿಸುತ್ತಾ, ದ್ವಾರಪಾಲಕರು, ಧ್ವಜದೇವತೆಗಳಿಂದ ಮೊದಲುಗೊಂಡು ಅನಂತ, ಗಣಪತಿ, ದಕ್ಷಿಣಾಮೂರ್ತಿ, ಇಂದ್ರ, ಅಗ್ನಿ, ಯಮ, ವರುಣ, ವಾಯು, ಚಂದ್ರ, ವೀರಭದ್ರ, ಸಪ್ತಮಾತೃಕಾ ಹೀಗೆ ಪ್ರತಿಯೊಬ್ಬರನ್ನೂ ವಾತ್ಸಲ್ಯದಿಂದ ವಿಚಾರಿಸುತ್ತಾ, ಉಪಚರಿಸುತ್ತಾ ಸೂಕ್ತವಾಗಿ ನಿವೇದನೆ ಸಲ್ಲುವಂತೆ ಪರ್ಯವೇಕ್ಷಣೆ ಮಾಡುತ್ತಿರುವ ದಿವ್ಯ ಸಂದರ್ಭದಲ್ಲಿ, ಪರಮಾತ್ಮನ ಹೆಜ್ಜೆಯೊಂದಿಗೆ ಹೆಜ್ಜೆ ಕೂಡಿಸುತ್ತಾ ನಡೆಯುವ ಅದ್ಭುತ ಸನ್ನಿವೇಶ. ಗವಾಕ್ಷಿಗಳಿಂದ ಪ್ರಸರಿಸುತ್ತಿರುವ ಸೂರ್ಯಕಿರಣಗಳಿಂದ ಪ್ರಜ್ವಲಿಸುತ್ತಿರುವ ದಿವ್ಯ ರೂಪ. ಸರ್ವಾತ್ಮಕನಾದ ಶ್ರೀಕೃಷ್ಣ ಸಾಮೀಪ್ಯದ ಅಲೌಕಿಕ ಆನಂದ.

ಮತ್ಸ್ಯ ಕೂರ್ಮೋ ವರಾಹಶ್ಚ ನಾರಸಿಂಹೋ ಚ ವಾಮನಾಃ ।

ರಾಮೋ ರಾಮಶ್ಚ ಭದ್ರಾಃ ಕೃಷ್ಣಶ್ಚ ಕಲ್ಕಿ ಚತೇ ದಶಃ ॥

ಮತ್ಸ್ಯ, ಕೂರ್ಮ, ವರಾಹ, ನಾರಸಿಂಹ, ವಾಮನ, ಪರಶುರಾಮ, ಶ್ರೀರಾಮ ಮುಂತಾದ ಅವತಾರಗಳನ್ನು ಸ್ವೀಕರಿಸಿ, ಮೂರು ಲೋಕಗಳನ್ನು ಸಂರಕ್ಷಿಸಿದ ನೀನು ನಮ್ಮೆಲ್ಲರಿಗೂ ಕಲ್ಯಾಣದಾಯಕನಾಗಿ ಬಂದೆಯಾ ಪರಮಾತ್ಮ ಎಂದು ಅವನ ಲೀಲಾ ಮಹಿಮೆಗಳನ್ನು ನೆನೆಯುತ್ತಾ ಶ್ರೀಶಂಕರಭಗವತ್ಪಾದರು ಈ ಪರಮ ಪವಿತ್ರ ಕ್ಷೇತ್ರದಲ್ಲಿ ರಚಿಸಿದರೆನ್ನಲಾದ ಗೋವಿಂದಾಷ್ಟಕ.

ಸತ್ಯಂ ಜ್ಞಾನಮನಂತಂ ನಿತ್ಯಮನಾಕಾಶಂ ಪರಮಾಕಾಶಮ್ ।<br>
ಗೋಷ್ಠಪ್ರಾಂಗಣರಿಂಖಣಲೋಲಮನಾಯಾಸಂ ಪರಮಾಯಾಸಮ್ ।<br>
ಮಾಯಾಕಲ್ಪಿತನಾನಾಕಾರಮನಾಕಾರಂ ಭುವನಾಕಾರಮ್ ।<br>
ಕ್ಷ್ಮಾಮಾನಾಥಮನಾಥಂ ಪ್ರಣಮತ ಗೋವಿಂದಂ ಪರಮಾನಂದಮ್ ॥ ೧ ॥

ಮೃತ್ಸ್ನಾಮತ್ಸೀಹೇತಿ ಯಶೋದಾತಾಡನಶೈಶವ ಸಂತ್ರಾಸಮ್ ।<br>
ವ್ಯಾದಿತವಕ್ತ್ರಾಲೋಕಿತಲೋಕಾಲೋಕಚತುರ್ದಶಲೋಕಾಲಿಮ್ ।<br>
ಲೋಕತ್ರಯಪುರಮೂಲಸ್ತಂಭಂ ಲೋಕಾಲೋಕಮನಾಲೋಕಮ್ ।<br>
ಲೋಕೇಶಂ ಪರಮೇಶಂ ಪ್ರಣಮತ ಗೋವಿಂದಂ ಪರಮಾನಂದಮ್ ॥ ೨ ॥

ತ್ರೈವಿಷ್ಟಪರಿಪುವೀರಘ್ನಂ ಕ್ಷಿತಿಭಾರಘ್ನಂ ಭವರೋಗಘ್ನಮ್ ।<br>
ಕೈವಲ್ಯಂ ನವನೀತಾಹಾರಮನಾಹಾರಂ ಭುವನಾಹಾರಮ್ ।<br>
ವೈಮಲ್ಯಸ್ಫುಟಚೇತೋವೃತ್ತಿವಿಶೇಷಾಭಾಸಮನಾಭಾಸಮ್ ।<br>
ಶೈವಂ ಕೇವಲಶಾಂತಂ ಪ್ರಣಮತ ಗೋವಿಂದಂ ಪರಮಾನಂದಮ್ ॥ ೩ ॥

ಗೋಪಾಲಂ ಪ್ರಭುಲೀಲಾವಿಗ್ರಹಗೋಪಾಲಂ ಕುಲಗೋಪಾಲಮ್ ।<br>
ಗೋಪೀಖೇಲನಗೋವರ್ಧನಧೃತಿಲೀಲಾಲಾಲಿತಗೋಪಾಲಮ್ ।<br>
ಗೋಭಿರ್ನಿಗದಿತ ಗೋವಿಂದಸ್ಫುಟನಾಮಾನಂ ಬಹುನಾಮಾನಮ್ ।<br>
ಗೋಪೀಗೋಚರದೂರಂ ಪ್ರಣಮತ ಗೋವಿಂದಂ ಪರಮಾನಂದಮ್ ॥ ೪ ॥

ಗೋಪೀಮಂಡಲಗೋಷ್ಠೀಭೇದಂ ಭೇದಾವಸ್ಥಮಭೇದಾಭಮ್ ।
ಶಶ್ವದ್ಗೋಖುರನಿರ್ಧೂತೋದ್ಗತ ಧೂಳೀಧೂಸರಸೌಭಾಗ್ಯಮ್ ।
ಶ್ರದ್ಧಾಭಕ್ತಿಗೃಹೀತಾನಂದಮಚಿಂತ್ಯಂ ಚಿಂತಿತಸದ್ಭಾವಮ್ ।
ಚಿಂತಾಮಣಿಮಹಿಮಾನಂ ಪ್ರಣಮತ ಗೋವಿಂದಂ ಪರಮಾನಂದಮ್ ॥ ೫ ॥
ಸ್ನಾನವ್ಯಾಕುಲಯೋಷಿದ್ವಸ್ತ್ರಮುಪಾದಾಯಾಗಮುಪಾರೂಢಮ್ ।
ವ್ಯಾದಿತ್ಸಂತೀರಥ ದಿಗ್ವಸ್ತ್ರಾ ದಾತುಮುಪಾಕರ್ಷಂತಂ ತಾಃ
ನಿರ್ಧೂತದ್ವಯಶೋಕವಿಮೋಹಂ ಬುದ್ಧಂ ಬುದ್ಧೇರಂತಸ್ಥಮ್ ।
ಸತ್ತಾಮಾತ್ರಶರೀರಂ ಪ್ರಣಮತ ಗೋವಿಂದಂ ಪರಮಾನಂದಮ್ ॥ ೬ ॥
ಕಾಂತಂ ಕಾರಣಕಾರಣಮಾದಿಮನಾದಿಂ ಕಾಲಧನಾಭಾಸಮ್ ।
ಕಾಳಿಂದೀಗತಕಾಲಿಯಶಿರಸಿ ಸುನೃತ್ಯಂತಮ್ ಮುಹುರತ್ಯಂತಂ ।
ಕಾಲಂ ಕಾಲಕಲಾತೀತಂ ಕಲಿತಾಶೇಷಂ ಕಲಿದೋಷಘ್ನಮ್ ।
ಕಾಲತ್ರಯಗತಿಹೇತುಂ ಪ್ರಣಮತ ಗೋವಿಂದಂ ಪರಮಾನಂದಮ್ ॥ ೭ ॥
ಬೃಂದಾವನಭುವಿ ಬೃಂದಾರಕಗಣಬೃಂದಾರಾಧಿತವಂದೇಹಂ ।
ಕುಂದಾಭಾಮಲಮಂದಸ್ಮೇರಸುಧಾನಂದಂ ಸುಹೃದಾನಂದಂ ।
ವಂದ್ಯಾಶೇಷ ಮಹಾಮುನಿ ಮಾನಸ ವಂದ್ಯಾನಂದಪದದ್ವಂದ್ವಮ್ ।
ವಂದ್ಯಾಶೇಷಗುಣಾಬ್ಧಿಂ ಪ್ರಣಮತ ಗೋವಿಂದಂ ಪರಮಾನಂದಮ್ ॥ ೮ ॥
ಗೋವಿಂದಾಷ್ಟಕಮೇತದಧೀತೇ ಗೋವಿಂದಾರ್ಪಿತಚೇತಾ ಯಃ ।
ಗೋವಿಂದಾಚ್ಯುತ ಮಾಧವ ವಿಷ್ಣೋ ಗೋಕುಲನಾಯಕ ಕೃಷ್ಣೇತಿ ।
ಗೋವಿಂದಾಂಘ್ರಿ ಸರೋಜಧ್ಯಾನಸುಧಾಜಲಧೌತಸಮಸ್ತಾಘಃ ।
ಗೋವಿಂದಂ ಪರಮಾನಂದಾಮೃತಮಂತಸ್ಥಂ ಸ ತಮಭ್ಯೇತಿ ॥

ಕಾಮಧೇನುವಿನ ಕ್ಷೀರದಿಂದ, ಐರಾವತದ ಸೊಂಡಿಲಿನಿಂದ, ಆಕಾಶಗಂಗೆಯ ಪವಿತ್ರ ಜಲದಿಂದ ಅಭಿಷೇಕ ಮಾಡಿಸಿಕೊಂಡು ಗೋವಿಂದ ನಾಮಾಂಕಿತನಾದ ಗೋವರ್ಧನ

ಗಿರಿಧಾರಿಯ ಲೀಲಾ ವಿಶೇಷಗಳನ್ನು ಮೆಲುಕು ಹಾಕುತ್ತಾ ಭಗವತಿಯ ಉಪದೇಗುಲದತ್ತ ಮುನ್ನಡೆ.

ನಂದಗೋಪಗೃಹೇ ಜಾತಾ ಯಶೋದಾ ಗರ್ಭಸಂಭವಾ.

ಗೋಡೆಯ ಮೇಲೆ ಶ್ರೀಕೃಷ್ಣ ಮತ್ತು ಆದಿಪರಾಶಕ್ತಿಯಿರುವ ಸುಂದರ ಚಿತ್ರ. ಕಾವಲ್ ದೇವತಾ ಎಂದು ಕರೆಯಲ್ಪಡುವ ಮಹಾನ್ ರಕ್ಷಕಿಯಾದ ದೇವಿಯ ದೇಗುಲವು ಶ್ರೀಕೃಷ್ಣನ ದೇವಾಲಯಕ್ಕಿಂತಾ ಪುರಾತನವಾದುದೆಂದು ಸ್ಮರಿಸುತ್ತಾ, ಅಶೋಕ ಮತ್ತು ಹಲಸಿನ ಮರದಡಿಯಲ್ಲಿ ವಿರಾಜಮಾನಳಾಗಿರುವ ಭಗವತಿಯ ದರ್ಶನಾನಂದವನ್ನು ಪಡೆದು, ಧರ್ಮಾರ್ಥ ಕಾಮ ಮೋಕ್ಷಗಳನ್ನು ಕರುಣಿಸು ಎಂದು ಪ್ರಾರ್ಥಿಸಿ, ಶ್ರೀಮಹಾವಿಷ್ಣುವನ್ನೇ ಯೋಗ ನಿದ್ರೆಯಿಂದ ಎಚ್ಚರಿಸಿದ ನೀನು, ನಮ್ಮನ್ನೂ ಅಜ್ಞಾನದ ನಿದ್ರೆಯಿಂದ ಎಬ್ಬಿಸು ಎಂದು ಬೇಡುತ್ತಾ, ದೇಗುಲದ ಪ್ರದಕ್ಷಿಣಾ ಪಥದ ಈಶಾನ್ಯ ಮೂಲೆಗೆ ಬಂದು, ಅಲ್ಲಿಂದ ಗೋಚರವಾಗುತ್ತಿರುವ ಪಾರ್ವತೀ ಪರಮೇಶ್ವರರ ದುಮ್ಮಿಯೂರ್ ದೇಗುಲದ ಗೋಪುರಕ್ಕೆ ವಂದಿಸಿ, ನಿಮ್ಮ ಸಹಕಾರದಿಂದ ಈ ಪರಮ ಪವಿತ್ರ ಕ್ಷೇತ್ರದ ಅಂಕುರಾರ್ಪಣೆ ನಡೆದು, ಗುರು ಮತ್ತು ವಾಯುಗಳಿಂದ, ದ್ವಾರಕೆಯ ಬಾಲ ಗೋಪಾಲ, ಸಮಸ್ತ ಭೂಮಂಡಲದ ರಾಜಾಧಿರಾಜ ಶ್ರೀಮನ್ನಾರಾಯಣ, ಗುರುವಾಯುಪುರಾಧೀಶನಾಗಿ ನಮ್ಮನ್ನು ಪರಿಪಾಲಿಸುತ್ತಿರುವುದು ಎಂದು ಆದಿದಂಪತಿಗಳಿಗೆ ಶ್ರೀಶಂಕರಭಗವತ್ಪಾದ ವಿರಚಿತ ಉಮಾಮಹೇಶ್ವರ ಸ್ತೋತ್ರದಿಂದ ಪ್ರಾರ್ಥನೆ.

ನಮಃ ಶಿವಾಭ್ಯಾಂ ನವಯೌವನಾಭ್ಯಾಂ
ಪರಸ್ಪರಾಶ್ಲಿಷ್ಟವಪುರ್ಧರಾಭ್ಯಾಮ್ ।
ನಗೇಂದ್ರಕನ್ಯಾವೃಷಕೇತನಾಭ್ಯಾಂ
ನಮೋ ನಮಃ ಶಂಕರಪಾರ್ವತೀಭ್ಯಾಮ್ ॥ 1 ॥
ನಮಃ ಶಿವಾಭ್ಯಾಂ ಸರಸೋತ್ಸವಾಭ್ಯಾಂ
ನಮಸ್ಕೃತಾಭೀಷ್ಟವರಪ್ರದಾಭ್ಯಾಮ್ ।
ನಾರಾಯಣೇನಾರ್ಚಿತಪಾದುಕಾಭ್ಯಾಂ
ನಮೋ ನಮಃ ಶಂಕರಪಾರ್ವತೀಭ್ಯಾಮ್ ॥ 2 ॥

ನಮಃ ಶಿವಾಭ್ಯಾಂ ವೃಷವಾಹನಾಭ್ಯಾಂ
ವಿರಿಂಚಿವಿಷ್ಣ್ವಿಂದ್ರಸುಪೂಜಿತಾಭ್ಯಾಮ್ ।
ವಿಭೂತಿಪಾಟೀರವಿಲೇಪನಾಭ್ಯಾಂ
ನಮೋ ನಮಃ ಶಂಕರಪಾರ್ವತೀಭ್ಯಾಮ್ ॥ 3 ॥
ನಮಃ ಶಿವಾಭ್ಯಾಂ ಜಗದೀಶ್ವರಾಭ್ಯಾಂ
ಜಗತ್ಪತಿಭ್ಯಾಂ ಜಯವಿಗ್ರಹಾಭ್ಯಾಮ್ ।
ಜಂಭಾರಿಮುಖ್ಯೈರಭಿವಂದಿತಾಭ್ಯಾಂ
ನಮೋ ನಮಃ ಶಂಕರಪಾರ್ವತೀಭ್ಯಾಮ್ ॥ 4 ॥
ನಮಃ ಶಿವಾಭ್ಯಾಂ ಪರಮೌಷಧಾಭ್ಯಾಂ
ಪಂಚಾಕ್ಷರೀಪಂಜರರಂಜಿತಾಭ್ಯಾಮ್ ।
ಪ್ರಪಂಚಸೃಷ್ಟಿಸ್ಥಿತಿಸಂಹೃತಾಭ್ಯಾಂ
ನಮೋ ನಮಃ ಶಂಕರಪಾರ್ವತೀಭ್ಯಾಮ್ ॥ 5 ॥
ನಮಃ ಶಿವಾಭ್ಯಾಮತಿಸುಂದರಾಭ್ಯಾಂ
ಅತ್ಯಂತಮಾಸಕ್ತಹೃದಂಬುಜಾಭ್ಯಾಮ್ ।
ಅಶೇಷಲೋಕೈಕಹಿತಂಕರಾಭ್ಯಾಂ
ನಮೋ ನಮಃ ಶಂಕರಪಾರ್ವತೀಭ್ಯಾಮ್ ॥ 6 ॥
ನಮಃ ಶಿವಾಭ್ಯಾಂ ಕಲಿನಾಶನಾಭ್ಯಾಂ
ಕಂಕಾಳಕಲ್ಯಾಣವಪುರ್ಧರಾಭ್ಯಾಮ್ ।
ಕೈಲಾಸಶೈಲಸ್ಥಿತದೇವತಾಭ್ಯಾಂ
ನಮೋ ನಮಃ ಶಂಕರಪಾರ್ವತೀಭ್ಯಾಮ್ ॥ 7 ॥
ನಮಃ ಶಿವಾಭ್ಯಾಮಶುಭಾಪಹಾಭ್ಯಾಂ
ಅಶೇಷಲೋಕೈಕವಿಶೇಷಿತಾಭ್ಯಾಮ್ ।
ಅಕುಂಠಿತಾಭ್ಯಾಂ ಸ್ಮೃತಿಸಂಭೃತಾಭ್ಯಾಂ

ನಮೋ ನಮಃ ಶಂಕರಪಾರ್ವತೀಭ್ಯಾಮ್॥8 ॥

ನಮಃ ಶಿವಾಭ್ಯಾಂ ರಥವಾಹನಾಭ್ಯಾಂ

ರವೀಂದುವೈಶ್ವಾನರಲೋಚನಾಭ್ಯಾಮ್ ।

ರಾಕಾಶಶಾಂಕಾಭಮುಖಾಂಬುಜಾಭ್ಯಾಂ

ನಮೋ ನಮಃ ಶಂಕರಪಾರ್ವತೀಭ್ಯಾಮ್ ॥9॥

ನಮಃ ಶಿವಾಭ್ಯಾಂ ಜಟಿಲಂಧರಾಭ್ಯಾಂ

ಜರಾಮೃತಿಭ್ಯಾಂ ಚ ವಿವರ್ಜಿತಾಭ್ಯಾಮ್ ।

ಜನಾರ್ದನಾಬ್ಜೋದ್ಭವಪೂಜಿತಾಭ್ಯಾಂ

ನಮೋ ನಮಃ ಶಂಕರಪಾರ್ವತೀಭ್ಯಾಮ್ ॥ 10 ॥

ನಮಃ ಶಿವಾಭ್ಯಾಂ ವಿಷಮೇಕ್ಷಣಾಭ್ಯಾಂ

ಬಿಲ್ವಚ್ಛದಾಮಲ್ಲಿಕದಾಮಭೃದ್ಭ್ಯಾಮ್ ।

ಶೋಭಾವತೀಶಾಂತವತೀಶ್ವರಾಭ್ಯಾಂ

ನಮೋ ನಮಃ ಶಂಕರಪಾರ್ವತೀಭ್ಯಾಮ್ ॥ 11 ॥

ನಮಃ ಶಿವಾಭ್ಯಾಂ ಪಶುಪಾಲಕಾಭ್ಯಾಂ

ಜಗತ್ರಯೀರಕ್ಷಣಬದ್ಧಹೃದ್ಭ್ಯಾಮ್ ।

ಸಮಸ್ತದೇವಾಸುರಪೂಜಿತಾಭ್ಯಾಂ

ನಮೋ ನಮಃ ಶಂಕರಪಾರ್ವತೀಭ್ಯಾಮ್ ॥ 12 ॥

ಸ್ತೋತ್ರಂ ತ್ರಿಸಂಧ್ಯಂ ಶಿವಪಾರ್ವತೀಭ್ಯಾಂ

ಭಕ್ತ್ಯಾ ಪಠೇದ್ವಾದಶಕಂ ನರೋ ಯಃ ।

ಸ ಸರ್ವಸೌಭಾಗ್ಯಫಲಾನಿ ಭುಂಕ್ತೇ

ಶತಾಯುರಾಂತೇ ಶಿವಲೋಕಮೇತಿ ॥ 13 ॥

ಪರಮಾತ್ಮನ ಅನಂತ ವೈಭವವನ್ನು ಸ್ತುತಿಸುವ ವೇದಘೋಷಾರಾವವನ್ನು ಕೇಳುತ್ತಾ, ನಾರಾಯಣೀಯಂ ನಂತಹ ಭಕ್ತಿ ಸ್ತೋತ್ರರೂಪವಾದ ಸದ್ ಗ್ರಂಥವನ್ನು ರಚಿಸಿ, ತನ್ನ

ಅನಾರೋಗ್ಯದಿಂದ ಸಂಪೂರ್ಣ ಮುಕ್ತಿ ಹೊಂದಿ, ಕೋಟ್ಯಾಂತರ ಜನರಿಗೆ ಆರೋಗ್ಯ ಪ್ರಾಪ್ತಿಯ ದಾರಿ ದೀಪವಾಗಿ, ಗುರುವಾಯುಪುರಾಧೀಶನೇ ವಾತಾಲೇಶನ್ ಎಂದು ಪ್ರಸಿದ್ಧಿಗೊಳ್ಳುವಂತೆ ಮಾಡಿದ ಮಹಾ ಚೇತನ ನಾರಾಯಣ ಭಟ್ಟತಿರಿಯವರ ಭಾವಚಿತ್ರಕ್ಕೆ ವಂದಿಸುತ್ತಾ, **ಹೇ ಕೃಷ್ಣಾ!**, ನಿನ್ನ ದಿವ್ಯನಾಮಗಳನ್ನು ಹೇಳುತ್ತಾ, ನಿನ್ನ ಪರಮ ಸುಂದರ ರೂಪವನ್ನು ದರ್ಶಿಸುತ್ತಾ, ಕಲ್ಯಾಣ ಗುಣಗಳಿಂದ ಕೂಡಿದ ನಿನ್ನ ದಿವ್ಯ ಕಥಾ ಗಾನವನ್ನು ಮಾಡುತ್ತಾ, ನಿನ್ನ ಪಾದಕಮಲಗಳಲ್ಲಿ ಧೃಡಭಕ್ತಿ ಉಂಟಾಗುವಂತೆ ದಯಮಾಡಿ ಅನುಗ್ರಹಿಸು, ಆದಿ - ವ್ಯಾಧಿಗಳು, ಶಾರೀರಿಕ ಮತ್ತು ಮಾನಸಿಕ ಕ್ಲೇಶಗಳನ್ನು ದೂರ ಮಾಡಿ,

ನನ್ನ ಪಾದಗಳು ನಿನ್ನ ದಿವ್ಯಕ್ಷೇತ್ರವನು ಸೇರುವಂತೆ,

ನನ್ನ ಕೈಗಳು ನಿನ್ನನ್ನು ಪೂಜಿಸುವಂತೆ,

ನನ್ನ ನೇತ್ರಗಳು ನಿನ್ನ ದಿವ್ಯವಾದ ಸ್ವರೂಪವನ್ನು ದರ್ಶಿಸುವಂತೆ,

ನನ್ನ ಮೂಗು ನಿನ್ನ ಪಾದದ ಬಳಿ ಇರುವ ತುಳಸಿಯನ್ನು ಆಘ್ರಾಣಿಸುವಂತೆ,

ನನ್ನ ಕಿವಿಗಳು ಮಧುರಾತಿ ಮಧುರವಾದ ನಿನ್ನ ಕಥೆಗಳನ್ನು ತುಂಬು ಭಕ್ತಿಯಿಂದ ಶ್ರವಣಿಸುವಂತೆ ಅನುಗ್ರಹಿಸು, ನಿನ್ನನ್ನು ಚೆನ್ನಾಗಿ ಉಪಾಸನೆ ಮಾಡುವುದಕ್ಕೆ ತಕ್ಕ ಆರೋಗ್ಯವನ್ನು ನನಗೆ ಕರುಣಿಸು, ಎಂದು ಬೇಡುತ್ತಾ, ಶ್ರೀಕೃಷ್ಣನ ಲೀಲಾ ಪ್ರಸಂಗಗಳನ್ನೊಳಗೊಂಡ ನಾರಾಯಣ ಸ್ತೋತ್ರಮ್ ಮತ್ತು ಶ್ರೀಕೃಷ್ಣ ಮಂಗಲಮ್.

ನಾರಾಯಣ ನಾರಾಯಣ ಜಯ ಗೋವಿಂದ ಹರೇ ॥

ನಾರಾಯಣ ನಾರಾಯಣ ಜಯ ಗೋಪಾಲ ಹರೇ ॥

ಕರುಣಾಪಾರಾವಾರ ವರುಣಾಲಯಗಂಭೀರ ನಾರಾಯಣ ॥ 1 ॥

ಘನನೀರದಸಂಕಾಶ ಕೃತಕಲಿಕಲ್ಮಷನಾಶನ ನಾರಾಯಣ ॥ 2 ॥

ಯಮುನಾತೀರವಿಹಾರ ಧೃತಕೌಸ್ತುಭಮಣಿಹಾರ ನಾರಾಯಣ ॥ 3 ॥

ಪೀತಾಂಬರಪರಿಧಾನ ಸುರಕಲ್ಯಾಣನಿಧಾನ ನಾರಾಯಣ ॥ 4 ॥

ಮಂಜುಲಗುಂಜಾಭೂಷ ಮಾಯಾಮಾನುಷವೇಷ ನಾರಾಯಣ ॥ 5 ॥

ರಾಧಾಧರಮಧುರಸಿಕ ರಜನೀಕರಕುಲತಿಲಕ ನಾರಾಯಣ ॥ 6 ॥

ಮುರಳೀಗಾನವಿನೋದ ವೇದಸ್ತುತಭೂಪಾದ ನಾರಾಯಣ ॥ 7 ॥

ಬರ್ಹಿನಿಬರ್ಹಾಪೀಡ ನಟನಾಟಕಫಣಿಕ್ರೀಡ ನಾರಾಯಣ ॥ 8 ॥

ವಾರಿಜಭೂಷಾಭರಣ ರಾಜೀವರುಕ್ಮಿಣೀರಮಣ ನಾರಾಯಣ ॥ 9 ॥

ಜಲರುಹದಳನಿಭನೇತ್ರ ಜಗದಾರಂಭಕಸೂತ್ರ ನಾರಾಯಣ ॥ 10 ॥

ಪಾತಕರಜನೀಸಂಹಾರ ಕರುಣಾಲಯ ಮಾಮುದ್ಧರ ನಾರಾಯಣ ॥ 11 ॥

ಅಘ ಬಕಹಯಕಂಸಾರೇ ಕೇಶವ ಕೃಷ್ಣ ಮುರಾರೇ ನಾರಾಯಣ ॥ 12 ॥

ಹಾಟಕನಿಭಪೀತಾಂಬರ ಅಭಯಂ ಕುರು ಮೇ ಮಾವರ ನಾರಾಯಣ ॥ 13 ॥

ದಶರಥರಾಜಕುಮಾರ ದಾನವಮದಸಂಹಾರ ನಾರಾಯಣ ॥ 14 ॥

ಗೋವರ್ಧನಗಿರಿ ರಮಣ ಗೋಪೀಮಾನಸಹರಣ ನಾರಾಯಣ ॥ 15 ॥

ಸರಯುತೀರವಿಹಾರ ಸಜ್ಜನಋಷಿಮಂದಾರ ನಾರಾಯಣ ॥ 16 ॥

ವಿಶ್ವಾಮಿತ್ರಮಖತ್ರ ವಿವಿಧವರಾನುಚರಿತ್ರ ನಾರಾಯಣ ॥ 17 ॥

ಧ್ವಜವಜ್ರಾಂಕುಶಪಾದ ಧರಣೀಸುತಸಹಮೋದ ನಾರಾಯಣ ॥ 18 ॥

ಜನಕಸುತಾಪ್ರತಿಪಾಲ ಜಯ ಜಯ ಸಂಸ್ಮೃತಿಲೀಲ ನಾರಾಯಣ ॥ 19 ॥

ದಶರಥವಾಗ್ಧೃತಿಭಾರ ದಂಡಕ ವನಸಂಚಾರ ನಾರಾಯಣ ॥ 20 ॥

ಮುಷ್ಟಿಕಚಾಣೂರಸಂಹಾರ ಮುನಿಮಾನಸವಿಹಾರ ನಾರಾಯಣ ॥ 21 ॥

ವಾಲಿವಿನಿಗ್ರಹಶೌರ್ಯ ವರಸುಗ್ರೀವಹಿತಾರ್ಯ ನಾರಾಯಣ ॥ 22 ॥

ಮಾಂ ಮುರಳೀಕರ ಧೀವರ ಪಾಲಯ ಪಾಲಯ ಶ್ರೀಧರ ನಾರಾಯಣ ॥ 23 ॥

ಜಲನಿಧಿ ಬಂಧನ ಧೀರ ರಾವಣಕಂಠವಿದಾರ ನಾರಾಯಣ ॥ 24 ॥

ತಾಟಕಮರ್ದನ ರಾಮ ನಟಗುಣವಿವಿಧ ಸುರಾಮ ನಾರಾಯಣ ॥ 25 ॥

ಗೌತಮಪತ್ನೀಪೂಜನ ಕರುಣಾಘನಾವಲೋಕನ ನಾರಾಯಣ ॥ 26 ॥

ಸಂಭ್ರಮಸೀತಾಹಾರ ಸಾಕೇತಪುರವಿಹಾರ ನಾರಾಯಣ ॥ 27 ॥

ಅಚಲೋದ್ಧೃತಚಂಚತ್ಕರ ಭಕ್ತಾನುಗ್ರಹತತ್ಪರ ನಾರಾಯಣ ॥ 28 ॥

ನೈಗಮಗಾನವಿನೋದ ರಕ್ಷಿತ ಸುಪ್ರಹ್ಲಾದ ನಾರಾಯಣ ॥ 29 ॥

ಭಾರತಿಯತಿವರಶಂಕರ ನಾಮಾಮೃತಮಖಿಲಾಂತರ ನಾರಾಯಣ ॥ 30 ॥

ನಾರಾಯಣ ನಾರಾಯಣ ಜಯ ಗೋವಿಂದ ಹರೇ ॥

ನಾರಾಯಣ ನಾರಾಯಣ ಜಯ ಗೋಪಾಲ ಹರೇ ॥

ಮಂಗಲಂ ಯಾದವೇಂದ್ರಾಯ ಮಹನೀಯ ಗುಣಾಬ್ಧಯೇ ।

ವಸುದೇವ ತನೂಜಾಯ ವಾಸುದೇವಾಯ ಮಂಗಲಂ ॥

ಕಿರೀಟ ಕುಂಡಲ ಭ್ರಾಜದಲಕೈರ್ಯನ್ಮುಖಶ್ರಿಯೇ ।

ಶ್ರೀವತ್ಸ ಕೌಸ್ತುಭೋದ್ಭಾಸಿ ವಕ್ಷಸೇಚಾಸ್ತು ಮಂಗಲಂ ॥

ನೀಲಾಂಬುದ ನಿಕಾಶಾಯ ವಿದ್ಯುತ್ ಸದೃಶ ವಾಸಸೇ ।

ದೇವಕೀ ವಸುದೇವಾಭ್ಯಾಂ ಸಂಸ್ತುತಾಯಾಸ್ತು ಮಂಗಲಂ ॥

ತಾಭ್ಯಾಮ್ ಸಂಪ್ರಾರ್ಥಿತಾಯಾಥ ಪ್ರಾಕೃತಾರ್ಭಕ ರೂಪಿಣೇ ।

ಯಶೋದಾಯ ಗೃಹಮ್ ಪಿತ್ರಾ ಪ್ರಾಪಿತಾಯಾಸ್ತು ಮಂಗಲಂ ॥

ಪೂತನಾಸುಪಯಃ ಪಾನಪೇಶಲಾಯಾಸುರಾರಿಣೇ ।

ಶಕಟಾಸುರ ವಿಧ್ವಂಸಿ ಪಾದಪದ್ಮಾಯ ಮಂಗಲಂ ॥

ಯಶೋದಾ ಲೋಕಿತೇಸ್ವಾಸ್ಯೇ ವಿಶ್ವರೂಪ ಪ್ರದರ್ಶಿನೇ ।

ಮಾಯಾಮಾನುಷರೂಪಾಯ ಮಾಧವಾಯಾಸ್ತು ಮಂಗಲಂ ॥

ತೃಣಾವರ್ತದನೂಜಾಸು ಹಾರಿಣೇ ಶುಭಕಾರಿಣೇ ।

ವತ್ಸಾಸುರ ಪ್ರಭೇತ್ರೇ ಚ ವತ್ಸಪಾಲಾಯ ಮಂಗಲಂ ॥

ದಾಮೋದರಾಯ ವೀರಾಯ ಯಮಲಾರ್ಜುನ ಪಾತಿನೇ ।

ಧಾತ್ರಾಹೃತಾನಾಮ್ ವತ್ಸಾನಾಮ್ ರೂಪಧತ್ರೇಸ್ತು ಮಂಗಲಂ ॥

ಬ್ರಹ್ಮಸ್ತುತಾಯ ಕೃಷ್ಣಾಯ ಕಾಲೀಯಫಣನೃತ್ಯತೇ ।

ದಾವಾಗ್ನಿ ರಕ್ಷಿತಾಶೇಷ ಗೋಗೋಪಾಲಾಯ ಮಂಗಲಂ ॥

ಗೋವರ್ಧನಾಚಲೋದ್ಧರ್ತ್ರೇ ಗೋಪೀಕ್ರೀಡಾಭಿಲಾಷಿಣೇ ।

ಅಂಜಲ್ಯಾಹೃತವಸ್ತ್ರಾಣಾಂ ಸುಪ್ರೀತಾಯಾಸ್ತು ಮಂಗಲಂ ॥

ಸುದರ್ಶನಾಖ್ಯ ಗಂಧರ್ವ ಶಾಪಮೋಕ್ಷಣಕಾರಿಣೇ ।

ಶಂಖಚೂಡಶಿರೋಹರ್ತ್ರೇ ವೃಷಭಘ್ನಾಯ ಮಂಗಲಂ ॥

ಗಾಂದಿನೀಸುತಸಂದೃಷ್ಟ ದಿವ್ಯರೂಪಾಯ ಶೌರಿಣೇ ।

ತ್ರಿವಕ್ರಯಾ ಪ್ರಾರ್ಥಿತಾಯ ಸುಂದರಾಂಗಾಯ ಮಂಗಲಂ ॥

ಗಂಧಮಾಲ್ಯಾಂಬರಾಢ್ಯಾಯ ಗಜರಾಜವಿಮರ್ಧಿನೇ ।

ಚಾಣೂರಮುಷ್ಟಿಕಪ್ರಾಣಹಾರಿಣೇ ಚಾಸ್ತು ಮಂಗಲಂ ॥

ಕಂಸಹಂತ್ರೇ ಜರಾಸಂಧ ಬಲಮರ್ದನಕಾರಿಣೇ ।

ಮಥುರಾಪುರವಾಸಾಯ ಮಹಾಧೀರಾಯ ಮಂಗಲಂ ॥

ಮುಚುಕುಂದ ಮಹಾನಂದದಾಯಿನೇ ಪರಮಾತ್ಮನೇ ।

ರುಕ್ಮಿಣೀ ಪರಿಣೇತ್ರೇ ಚ ಸಬಲಾಯಾಸ್ತು ಮಂಗಲಂ ॥

ದ್ವಾರಕಾಪುರವಾಸಾಯ ಹಾರನೂಪುರಧಾರಿಣೇ ।

ಸತ್ಯಭಾಮಾ ಸಮೇತಾಯ ನರಕಘ್ನಾಯ ಮಂಗಲಂ ॥

ಬಾಣಾಸುರ ಕರಚ್ಛೇತ್ರೇ ಭೂತನಾಥಸ್ತುತಾಯ ಚ ।

ಧರ್ಮಹೂತಾಯ ಯಾಗಾರ್ಥಮ್ ಶರ್ಮದಾಯಾಸ್ತು ಮಂಗಲಂ ॥

ಕಾರಯಿತ್ರೇ ಜರಾಸಂಧವಧಮ್ ಭೀಮೇನ ರಾಜಭಿಃ ।

ಮುಕ್ತೈಸ್ಸುತಾಯ ತತ್ಪುತ್ರರಾಜ್ಯದಾಯಾಸ್ತು ಮಂಗಲಂ ॥

ಚೈದ್ಯತೇಜೋಪಹರ್ತ್ರೇ ಚ ಪಾಂಡವಪ್ರಿಯಕಾರಿಣೇ ।

ಕುಚೇಲಾಯ ಮಹಾಭಾಗ್ಯದಾಯಿನೇ ತೇಸ್ತು ಮಂಗಲಂ ॥

ದೇವ್ಯಷ್ಟಕಸಮೇತಾಯ ಪುತ್ರಪೌತ್ರಯುತಾಯ ಚ ।

ಷೋಡಶಸ್ತ್ರೀ ಸಹಸ್ರೈಸ್ತು ಸಂಯುತಾಯಾಸ್ತು ಮಂಗಲಂ ॥

ಯಃ ಶಿಷ್ಟರಕ್ಷಣಪರಃ ಕರುಣಾಂಬುರಾಶಿಃ

ದುಷ್ಟಾಸುರಾಂಶನೃಪತೀನ್ ವಿನಿಗೃಹ್ಯ ಶೂರಾನ್ ।

ಕಷ್ಟಾಂ ದಶಾಂ ಅಪನುದಂತರಸಾ ಪೃಥಿವ್ಯಾಃ

ಪುಷ್ಟಿಂ ದದಾತು ಸ ಹರಿಃ ಕುಲದೈವತಂ ನಃ ॥

**॥ ಶ್ರೀಕೃಷ್ಣಾರ್ಪಣಮಸ್ತು ॥**

ವಂದೇ ವಂದ್ಯಂ ಸದಾನಂದಂ ವಾಸುದೇವಂ ನಿರಂಜನಮ್ ।

ಇಂದಿರಾಪತಿ ಮಾದ್ಯಾದಿ ವರದೇಶ ವರಪ್ರದಮ್ ॥ ೧ ॥

ನಮಾಮಿ ನಿಖಿಲಾಧೀಶ ಕಿರೀಟಾ ಘೃಷ್ಟ ಪೀಠವತ್ ।

ಹೃತ್ತಮಃ ಶಮನೇಽರ್ಕಾಭಂ ಶ್ರೀಪತೇಃ ಪಾದ ಪಂಕಜಮ್ ॥೨॥

ಜಾಂಬೂನದಾಂಬರಾಧಾರಂ ನಿತಂಬಂ ಚಿಂತ್ಯ ಮೀಶಿತುಃ ।

ಸ್ವರ್ಣ ಮಂಜೀರ ಸಂವೀತಮ್ ಆರೂಢಂ ಜಗದಂಬಯಾ ॥ ೩ ॥

ಉದರಂ ಚಿಂತ್ಯ ಮೀಶಸ್ಯ ತನುತ್ವೇಽಪ್ಯ ಅಖಿಲಂ ಭರಮ್ ।

ವಲಿತ್ರ ಯಾಂಕಿತಂ ನಿತ್ಯಮ್ ಉಪ ಗೂಢಂ ಶ್ರಿಯೈಕಯಾ ॥ ೪ ॥

ಸ್ಮರಣೀಯಮ್ ಉರೋ ವಿಷ್ಣೋರ್ ಇಂದಿರಾವಾಸಮ್ ಈಶಿತುಃ ।

ಅನಂತಮ್ ಅಂತ ವದಿವ ಭುಜಯೋರ್ ಅಂತರಂಗತಮ್ ॥ ೫ ॥

ಶಂಖ ಚಕ್ರ ಗಧಾ ಪದ್ಮ ಧರಾಶ್ಚಿಂತ್ಯಾ ಹರೇರ್ಭುಜಾಃ ।

ಪೀನವೃತ್ತಾ ಜಗದ್ರಕ್ಷಾ ಕೇವಲೋದ್ಯೋಗಿನೋಽ ನಿಶಮ್ ॥ ೬ ॥

ಸಂತತಂ ಚಿಂತಯೇತ್ ಕಂಠಂ ಭಾಸ್ವತ್ ಕೌಸ್ತುಭ ಭಾಸಕಮ್ ।

ವೈಕುಂಠಸ್ಯ ಅಖಿಲಾ ವೇದಾ ಉದ್ಗೀರ್ಯಂತೇಽ ಅನಿಶಂ ಯತಃ ॥ ೭ ॥

ಸ್ಮರೇತ್ ಯಾಮಿನೀನಾಥ ಸಹಸ್ರಾಮಿತ ಕಾಂತಿಮತ್ ।

ಭವತಾಪಾಪ ನೋದೀಡ್ಯಂ ಶ್ರೀಪತೇ ಮುಖ ಪಂಕಜಮ್ ॥ ೮ ॥

ಪೂರ್ಣಾನನ್ಯ ಸುಖೋದ್ಭಾಸಿ ಮಂದಸ್ಮಿತಮ್ ಅಧೀಶಿತುಃ ।
ಗೋವಿಂದಸ್ಯ ಸದಾ ಚಿಂತ್ಯಂ ನಿತ್ಯಾನಂದ ಪದ ಪ್ರದಮ್ ॥ ೯ ॥
ಸ್ಮರಾಮಿ ಭವ ಸಂತಾಪ ಹಾನಿದಾಮೃತ ಸಾಗರಮ್
ಪೂರ್ಣಾನಂದಸ್ಯ ರಾಮಸ್ಯ ಸಾನುರಾಗಾವ ಲೋಕನಮ್ ॥ ೧೦ ॥
ಧ್ಯಾಯೇದ್ ಅಜಸ್ರಮ್ ಮೀಶಸ್ಯ ಪದ್ಮಜಾದಿ ಪ್ರತೀಕ್ಷಿತಮ್ ।
ಭ್ರೂಭಂಗಂ ಪಾರಮೇಷ್ಠ್ಯಾದಿ ಪದದಾಯಿ ವಿಮುಕ್ತಿದಮ್ ॥ ೧೧ ॥
ಸತತಂ ಚಿಂತಯೇಽನಂತಮ್ ಅಂತಕಾಲೇ ವಿಶೇಷತಃ ।
ನೈವೋದಾಪುಗು ಗೃಣಂತೋಽಂತಂ ಯದ್ಗುಣಾನಾಮ್ ಅಜಾದಯಃ ॥೧೨॥

॥ ಇತಿ ಶ್ರೀ ಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತೇಷು ದ್ವಾದಶಸ್ತೋತ್ರೇಷು ಪ್ರಥಮಂ ಸ್ತೋತ್ರಮ್ ॥

ವಂದಿತ ಶೇಷ ವಂದ್ಯೋರು ವೃಂದಾರಕಂ ಚಂದನ ಚರ್ಚಿತೋ ದಾರಪೀಣಾಂಸಕಮ್
।
ಇಂದಿರ ಚಂಚಲ ಪಾಂಗನೀರಾಜಿತಂ ಮಂದರೋದ್ಧಾರಿ ವೃತ್ತೋದ್ಭುಜಾಭೋಗಿನಂ ॥
ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾ ಖಂಡಮಂಡಾನಂ
ಪ್ರೀಣಯಾಮೋ ವಾಸುದೇವಂ ॥
ಸೃಷ್ಟಿ ಸಂಹಾರ ಲೀಲಾವಿಲಾಸಾತತಂ ಪುಷ್ಟ ಷಾಡ್ಗುಣ್ಯ ಸದ್ವಿಗ್ರಹೋಲ್ಲಾಸಿನಮ್ ।
ದುಷ್ಟ ನಿಶ್ಶೇಷ ಸಂಹಾರಕ ಮೋದ್ಯತಂ ಹೃಷ್ಟ ಪುಷ್ಟಾನುತಿಶಿಷ್ಟ ಪ್ರಜಾಸಂಶ್ರಯಂ ॥
ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾ ಖಂಡಮಂಡಾನಂ
ಪ್ರೀಣಯಾಮೋ ವಾಸುದೇವಂ ॥
ಉನ್ನತ ಪ್ರಾರ್ಥಿತಾ ಶೇಷ ಸಂಸಾಧಕಂ ಸನ್ನತಾಲೌಕಿಕಾ ನಂದದ ಶ್ರೀಪದಮ್ ।
ಭಿನ್ನ ಕರ್ಮಾಶಯ ಪ್ರಾಣಿಸಂಪ್ರೇರಕಂ ತನ್ನಕಿಂನೇತಿ ವಿದ್ವತ್ಸು ಮಿಮಾಂಸಿತಂ॥
ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾ ಖಂಡಮಂಡಾನಂ
ಪ್ರೀಣಯಾಮೋ ವಾಸುದೇವಂ ॥

ವಿಪ್ರಮುಖ್ಯೈಃ ಸದಾವೇದವಾದೋನ್ಮುಖೈಃ ಸುಪ್ರತಾಪೈಃ ಕ್ಷೀತಿಶೇಶ್ವರೈಶ್ಚಾರ್ಚಿತಂ ।
ಅಪ್ರತರ್ಕ್ಯೋರು ಸಂವಿದ್ಗುಣಂ ನಿರ್ಮಲಂ ಸಪ್ರಕಾಶಾಜರಾನಂದ ರೂಪಂಪರಂ ॥
ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾ ಖಂಡಮಂಡಾನಂ
ಪ್ರೀಣಯಾಮೋ ವಾಸುದೇವಂ ॥
ಅತ್ಯಯೋ ಯಸ್ಯ ಕೇನಾಪಿನಕ್ವಾಪಿಹಿ ಪ್ರತ್ಯತೋ ಯದ್ಗುಣೇಷೂತ್ತಮಾನಾಂಪರಃ ।
ಸತ್ಯಸಂಕಲ್ಪ ಏಕೋ ವರೇಣ್ಯೋ ವಶೀ ಮತ್ಯನೂನೈಃ ಸದಾ ವೇದವಾದೋದಿತಃ ॥
ಪಶ್ಯತಾಂ ದುಃಖ ಸಂತಾನ ನಿರ್ಮೂಲನಂ ದೃಶ್ಯತಾಂ ದೃಶ್ಯತಾಮಿತ್ಯ
ಜೇಶಾರ್ಥಿತಮ್ ।
ನಶ್ಯತಾಂ ದೂರಗಂ ಸರ್ವದಾಪ್ಯಾತ್ಮಗಂ ಪಶ್ಯತಾಂ ಸ್ವೇಚ್ಛಯಾ ಸಜ್ಜನೇಷ್ವಾಗತಂ ॥
ಅಗ್ರಜಂ ಯಃ ಸಸರ್ಜಾಜಮಗ್ರ್ಯಾಕೃತಿಂ ವಿಗ್ರಹೋಯಸ್ಯ ಸರ್ವೇಗುಣಾ ಏವ ಹಿ ।
ಉಗ್ರ ಆದ್ಯೋಽಪಿ ಯಸ್ಯಾತ್ಮಜಾಗ್ರ್ಯಾತ್ಮಜಃ ಸದ್ಗೃಹೀತಃ ಸದಾಯಃ ಪರಂದೈವತಮ್
॥
ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾ ಖಂಡಮಂಡಾನಂ
ಪ್ರೀಣಯಾಮೋ ವಾಸುದೇವಂ ॥
ಅಚ್ಯುತೋ ಯೋ ಗುಣೈರ್ನಿತ್ಯಮೇವಾಖಿಲೈಃ ಪ್ರಚ್ಯುತೋಽಶೇಷ ದೋಷೈಃ
ಸದಾಪೂರ್ತಿತ ।
ಉಚ್ಯತೇ ಸವವೇದೋರು ವಾದೈರಜಃ ಸ್ವಜಿತೋ(ಚ್ಯತೇ) ಬ್ರಹ್ಮರುದ್ರೇಂದ್ರ
ಪೂರ್ವೈಸ್ಸದಾ ॥
ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾ ಖಂಡಮಂಡಾನಂ
ಪ್ರೀಣಯಾಮೋ ವಾಸುದೇವಂ ॥
ಧಾರ್ಯತೇ ಯೇನವಿಶ್ವಂ ಸದಾಜಾದಿಕಂ ವಾರ್ಯತೇ ಶೇಷ ದುಃಖಂ
ನಿಜಧ್ಯಾಯಿನಾಂ ।

ಪಾರ್ಯತೇ ಸರ್ವಮನ್ಯೈರ್ನಯತ್ಪಾರ್ಯತೇ ಕಾರ್ಯತೇ ಚಾಖಿಲಂ ಸರ್ವಭೂತೈಃ ಸದಾ ॥

ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾ ಖಂಡಮಂಡಾನಂ

ಪ್ರೀಣಯಾಮೋ ವಾಸುದೇವಂ ॥

ಸವಪಾಪಾನಿ ಯತ್ಸಂಸ್ಮೃತೇಃ ಸಂಕ್ಷಯ ಸರ್ವದಾ ಯಾಂತಿಭಕ್ತ್ಯಾವಿಶುದ್ಧಾತ್ಮನಾಂ ।

ಶರ್ವಗುರ್ವಾದಿಗೀರ್ವಾಣ ಸಂಸ್ಥಾನದಃ ಕುರ್ವತೇ ಕರ್ಮ ಯತ್ಪ್ರೀತಯೆ ಸಜ್ಜನಾಃ ॥

ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾ ಖಂಡಮಂಡಾನಂ

ಪ್ರೀಣಯಾಮೋ ವಾಸುದೇವಂ ॥

ಅಕ್ಷಯಂ ಕರ್ಮಯಸ್ಮಿನ್ ಪರೇಸ್ವರ್ಪಿತಂऽ ಪ್ರಕ್ಷ ಯಂ ಯಾಂತಿ ದುಃಖಾನಿಃಯನ್ನಾಮತ ।

ಅಕ್ಷರೋಯೋऽಜರಃ ಸರ್ವದೈವಾಮೃತಃ ಕುಕ್ಷಿಗಂ ಯಸ್ಯ ವಿಶ್ವಂ ಸದಾಜಾದಕಮ್ ॥

ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾ ಖಂಡಮಂಡಾನಂ

ಪ್ರೀಣಯಾಮೋ ವಾಸುದೇವಂ ॥

ನಂದಿತೀರ್ಥೋऽರುಸನ್ನಾಮಿನೋ ನಂದಿನಃ ಸಂದಧಾನಾಃ ಸದಾನಂದದೇವೇ ಮತಿಮ್ ।

ಮಂದಹಾಸಾರುಣಾಪಾಂಗ ದತ್ತೋನ್ನತಿಂ ನ(ವಂ)ದಿತಾ ಶೇಷದೇವಾದಿ ವೃಂದಂ ಸದಾ ॥

ಪ್ರೀಣಯಾಮೋ ವಾಸುದೇವಂ ದೇವತಾಮಂಡಲಾ ಖಂಡಮಂಡಾನಂ

ಪ್ರೀಣಯಾಮೋ ವಾಸುದೇವಂ ॥

॥ ಇತಿ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯ ವಿರಚಿತೇಷು ದ್ವಾದಶಸ್ತೋತ್ರೇಷು ಅಷ್ಟಮಸ್ತೋತ್ರಂ ಸಂಪೂರ್ಣಂ ॥


ಕೃಷ್ಣ

